Volume : 9 ಸಂಪುಟ : 9 | Issue : 219 ಸಂಚಿಕೆ : 219 | November : 21, 2026 : Saturday ನವಂಬರ್ : 21, 2026 : ಶನಿವಾರ

www.VIKRAMAVAHINI.com

ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

ವಿಕ್ರಮ ವಾಹಿನಿ

ಪುಟ 4 ₹2 || ಕನ್ನಡ ದಿನಪತ್ರಿಕೆ || VIKRAMA VAHINI

PRGI NO: KARKAN/2018/78481



ಖ್ಯಾತ ನಟಿ ಸಮಂತಾ ರುತ್ ಪ್ರಭು ಮತ್ತು ಚಿತ್ರ ನಿರ್ಮಾಪಕ ರಾಜ್ ನಿಧಿಮೋರ್ ದಂಪತಿಗೆ ಮೊದಲ ಮಗು ಜನಿಸಿದ್ದು, ಈ ಸಿನಿ ದಂಪತ ಈ ವಿಷಯವನ್ನು ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದು ಇವರಿಗೆ ಶುಭಾಶಯಗಳ ಮಹಾಪೂರ ಹರಿದು ಬಂದಿದೆ.

'ಜನಪ್ರಿಯತೆಗಾಗಿ ಸತ್ಯನಿಷ್ಠೆ, ಜವಾಬ್ದಾರಿಯನ್ನು ಬಲಿಕೊಡಬಾರದು' । ಪುಟ 3

ಶ್ರೀ ವಿಜಯದಾಸರ ಕೊಡುಗೆಯ ಬಹುಮುಖ ಆಯಾಮಗಳು...



। ಪುಟ 2

■ ಸುದ್ದಿ ಚುಟುಕು

ಬೈಕ್ ಟ್ಯಾಕ್ಸಿ: ಎಜಿ ಜೊತೆ ಚರ್ಚಿಸಿ ಅಂತಿಮ ನಿರ್ಧಾರ: ಸಚಿವ ಬೈರತಿ ಸುರೇಶ್

● ವಿಕ್ರಮ ವಾಹಿನಿ । ಬೆಂಗಳೂರು

ಬೈಕ್ ಟ್ಯಾಕ್ಸಿ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಾರಿಗೆ ಸಚಿವ ಬೈರತಿ ಸುರೇಶ್, ಸುಪ್ರೀಂ ಕೋರ್ಟ್ ಆದೇಶವನ್ನು ಪಾಲನೆ ಮಾಡಬೇಕಾಗುತ್ತದೆ. ಆದಾಗ್ಯೂ ಈ ಕುರಿತು ಅಡ್ವೋಕೇಟ್ ಜನರಲ್ ಅವರೊಂದಿಗೆ ಇನ್ನೊಮ್ಮೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.



ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬೈಕ್ ಟ್ಯಾಕ್ಸಿ ವಿಚಾರದಲ್ಲಿ ಅನೇಕ ನಿಯಮಗಳನ್ನು ಹೇರುವ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದೇವೆ. ಈ ಸಂಬಂಧ ನಿಯಮಗಳನ್ನು ರೂಪಿಸುವಂತೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಬೈಕ್ ಟ್ಯಾಕ್ಸಿಯಲ್ಲಿ ಪ್ರಯಾಣ ಮಾಡುವ ಸಹಪ್ರಯಾಣಿಕರ ಅದರಲ್ಲೂ ಪ್ರಮುಖವಾಗಿ ಮಹಿಳಾ ಪ್ರಯಾಣಿಕರ ಸುರಕ್ಷತೆ ನಮ್ಮ ಆದ್ಯತೆ. ಈ ಹಿನ್ನೆಲೆಯಲ್ಲಿ ಬೈಕ್ ಟ್ಯಾಕ್ಸಿ ಚಲಾಯಿಸುವವರ ದಾಖಲೆಗಳು, ಜಿಪಿಎಸ್ ಅಳವಡಿಕೆ, ವಾಹನಕ್ಕೆ ವಿಮೆ ಮತ್ತು ಇತರ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಇಂತಹ ಹಲವು ನಿಯಮಗಳನ್ನು ರೂಪಿಸಿ ಬೈಕ್ ಟ್ಯಾಕ್ಸಿಗೆ ಅವಕಾಶ ನೀಡುವ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮಾಲಿನ್ಯ ಪ್ರಮಾಣ ಪತ್ರದ ಅವಧಿ ವಿಸ್ತರಣೆ

● ವಿಕ್ರಮ ವಾಹಿನಿ । ನವದೆಹಲಿ

ವಾಹನ ಮಾಲೀಕರಿಗೆ ಕೇಂದ್ರ ಸರ್ಕಾರ ಸಿಹಿ ಸುದ್ದಿ ನೀಡಿದೆ. ಆರು ವರ್ಷಗಳವರೆಗಿನ ಹೊಸ ಬಿಎಸ್-6 ಖಾಸಗಿ ಕಾರು ಮತ್ತು ದ್ವಿಚಕ್ರ ವಾಹನಗಳ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರದ (ಪಿಯುಸಿ) ಮಾನ್ಯತಾ ಅವಧಿಯನ್ನು ಮೂರು ವರ್ಷಗಳಿಗೆ ವಿಸ್ತರಿಸಲಾಗಿದೆ. ಆದರೆ ಈ ಸೌಲಭ್ಯ ಹಳೆಯ ವಾಹನಗಳು ಹಾಗೂ ವಾಣಿಜ್ಯ ವಾಹನಗಳಿಗೆ ಅನ್ವಯಿಸುವುದಿಲ್ಲ.

ಕಡಿಮೆ ಪ್ರಮಾಣದ ಹೊಗೆ ಹೊರಸೂಸುವ ಹೊಸ ವಾಹನಗಳಿಗೆ ಪದೇಪದೆ ಮಾಲಿನ್ಯ ಪರೀಕ್ಷೆ ಮಾಡಿಸುವ ಕಿರಿಕಿರಿಯನ್ನು ತಪ್ಪಿಸುವುದರ ಜತೆಗೆ, ಹಳೆಯ ವಾಹನಗಳ ಮೇಲೆ ಹೆಚ್ಚಿನ ನಿಗಾ ವಹಿಸುವ ಉದ್ದೇಶದಿಂದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಈ ನಿಯಮ ಜಾರಿಗೆ ತಂದಿದೆ. ವಾಹನದ ಮಾಲಿನ್ಯ ನಿಯಂತ್ರಣ ಮಾನದಂಡ, ಬಳಕೆಯ ಸ್ವರೂಪ ಹಾಗೂ ಮೊದಲ ಬಾರಿಗೆ ನೋಂದಣಿಯಾದ ದಿನಾಂಕದ ಆಧಾರದ ಮೇಲೆ ಪಿಯುಸಿ ಪ್ರಮಾಣಪತ್ರದ ಮಾನ್ಯತಾ ಅವಧಿಯನ್ನು ನಿರ್ಧರಿಸಲಾಗುತ್ತದೆ.

ಖಾಸಗಿ ಬಿಎಸ್-6 ಕಾರು ಮತ್ತು ದ್ವಿಚಕ್ರ ವಾಹನಗಳ ಪೈಕಿ ಆರು ವರ್ಷದೊಳಗಿನ ವಾಹನಗಳಿಗೆ ಮೂರು ವರ್ಷ, ಆರು ವರ್ಷದಿಂದ 10 ವರ್ಷದೊಳಗಿನ ವಾಹನಗಳಿಗೆ ಒಂದು ವರ್ಷ ಹಾಗೂ 10 ವರ್ಷ ಮೇಲ್ಪಟ್ಟ ವಾಹನಗಳಿಗೆ ಆರು ತಿಂಗಳ ಪಿಯುಸಿ ಮಾನ್ಯತೆ ಇರಲಿದೆ. ವಾಣಿಜ್ಯ ಬಿಎಸ್-6 ವಾಹನಗಳಾದ ಟ್ಯಾಕ್ಸಿ, ಬಸ್ ಮತ್ತು ಲಾರಿಗಳಿಗೆ ಆರು ವರ್ಷದೊಳಗಿನ ವಾಹನಗಳಿಗೆ ಎರಡು ವರ್ಷ, ಆರು ವರ್ಷದಿಂದ 10 ವರ್ಷದೊಳಗಿನ ವಾಹನಗಳಿಗೆ ಒಂದು ವರ್ಷ ಹಾಗೂ 10 ವರ್ಷ ಮೇಲ್ಪಟ್ಟ ವಾಹನಗಳಿಗೆ ಆರು ತಿಂಗಳ ಮಾನ್ಯತೆ ನೀಡಲಾಗುತ್ತದೆ. ಇನ್ನು ಹಳೆಯ ವಾಹನಗಳ ವಿಚಾರದಲ್ಲಿ ಖಾಸಗಿ ಹಾಗೂ ವಾಣಿಜ್ಯ ವಾಹನಗಳ ಬಿಎಸ್-4 ಮಾದರಿಗಳಿಗೆ ಪ್ರತಿ ಆರು ತಿಂಗಳಿಗೊಮ್ಮೆ ಮತ್ತು ಬಿಎಸ್-1, ಬಿಎಸ್-2 ಹಾಗೂ ಬಿಎಸ್-3 ಮಾದರಿಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಪಿಯುಸಿ ಪರೀಕ್ಷೆ ಕಡ್ಡಾಯವಾಗಿದೆ.



ತಮಿಳುನಾಡಿಗೆ ಸುಪ್ರೀಂಕೋರ್ಟ್‌ನಲ್ಲಿ ಭಾರೀ ಮುಖಭಂಗ

11 ಟಿಎಂಸಿ ನೀರು ಕೇಳಿದ್ದ ಮಧ್ಯಂತರ ಅರ್ಜಿಗಳು ವಜಾ

● ವಿಕ್ರಮ ವಾಹಿನಿ । ನವದೆಹಲಿ

ಕರ್ನಾಟಕದಿಂದ ಬಾಕಿ ಇರುವ 11 ಟಿಎಂಸಿ ಹೆಚ್ಚುವರಿ ಕಾವೇರಿ ನೀರನ್ನು ತಕ್ಷಣ ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಬೇಕೆಂದು ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಎರಡು ಮಧ್ಯಂತರ ಅರ್ಜಿಗಳನ್ನು ಸುಪ್ರೀಂಕೋರ್ಟ್ ಇಂದು ಶುಕ್ರವಾರ ವಜಾಗೊಳಿಸಿದೆ.

ಈ ಮೂಲಕ ಕಾವೇರಿ ನೀರಿನ ವಿಚಾರದಲ್ಲಿ ತಮಿಳುನಾಡು ಸರ್ಕಾರಕ್ಕೆ ಹಿನ್ನಡೆಯಾಗಿದೆ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಪರೇಶ್ ಕುಮಾರ್ ಸಿಂಗ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಈ ಮಹತ್ವದ ಆದೇಶ ಹೊರಡಿಸಿದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶಗಳನ್ನು ಕರ್ನಾಟಕ ಸರ್ಕಾರ ಪಾಲಿಸುತ್ತಿಲ್ಲ ಎಂದು ಆರೋಪಿಸಿದ್ದ ತಮಿಳುನಾಡು, ಬಾಕಿ ಇರುವ ನೀರನ್ನು ಬಿಡುಗಡೆ ಮಾಡಲು ಕರ್ನಾಟಕಕ್ಕೆ ನಿರ್ದೇಶನ ನೀಡುವಂತೆ ನ್ಯಾಯಾಲಯವನ್ನು ಕೋರಿತ್ತು. ಆದರೆ, ಕರ್ನಾಟಕಕ್ಕೆ ಯಾವುದೇ ಹೊಸ ನಿರ್ದೇಶನ ನೀಡಲು ನಿರಾಕರಿಸಿದ ನ್ಯಾಯಪೀಠ, ಸಲ್ಲಿಕೆಯಾಗಿದ್ದ ಎರಡು ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಿರುವುದಾಗಿ ಸ್ಪಷ್ಟಪಡಿಸಿತು.

ಅಂತರರಾಜ್ಯ ಗಡಿಯಲ್ಲಿರುವ ಬಿಳಿಗುಂಡ್ಲು ಅಳತೆ ಕೇಂದ್ರದವರೆಗೆ ಅಕ್ಟೋಬರ್ 6ರ ವೇಳೆಗೆ ತಲುಪಬೇಕಿದ್ದ ನೀರಿನಲ್ಲಿ 11.719 ಟಿಎಂಸಿ ಕೊರತೆಯಾಗಿದೆ ಎಂದು ತಮಿಳುನಾಡು ವಾದಿಸಿತ್ತು. ಕರ್ನಾಟಕದ ಜಲಾಶಯಗಳಲ್ಲಿ ಸಾಕಷ್ಟು ನೀರಿನ ಸಂಗ್ರಹವಿದ್ದರೂ ತಮಿಳುನಾಡಿಗೆ ನೀರು ಬಿಡುಗಡೆ ಮಾಡುತ್ತಿಲ್ಲ. ಇದರಿಂದ ರಾಜ್ಯದ ಕೃಷಿ ಚಟುವಟಿಕೆಗಳಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಆರೋಪಿಸಿತ್ತು.

ಮಳೆಯ ಕೊರತೆಯಿಂದಾಗಿ ತನ್ನ ಪಾಲಿನ ಕಾವೇರಿ ನೀರು ಕರ್ನಾಟಕದಿಂದ ಸಮರ್ಪಕವಾಗಿ ಹರಿದುಬಂದಿಲ್ಲ. ಸುಮಾರು 11 ಟಿಎಂಸಿ ನೀರಿನ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ.

ಇದರಿಂದ ಬೆಳೆಗಳಿಗೆ ಹಾನಿಯಾಗುತ್ತಿದೆ ಎಂದು ತಮಿಳುನಾಡು ಸರ್ಕಾರ ಕಳೆದ ಆಗಸ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಆದರೆ, ತಮಿಳುನಾಡಿನ ಆರೋಪಗಳನ್ನು ಕರ್ನಾಟಕ ಸರ್ಕಾರ ತಳ್ಳಿಹಾಕಿತ್ತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹೊರಡಿಸಿರುವ ಆದೇಶಗಳನ್ನು ಚಾಚೂತಪ್ಪದೆ ಪಾಲಿಸುತ್ತಿದ್ದು, ನಿಯಮಾನುಸಾರವೇ ನೀರು ಬಿಡುಗಡೆ ಮಾಡಲಾಗುತ್ತಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿತ್ತು.

ಇದೇ ವೇಳೆ, ತಮಿಳುನಾಡು ಸರ್ಕಾರ ಶುಕ್ರವಾರ ಮತ್ತೊಂದು ಹೊಸ ಅರ್ಜಿಯನ್ನೂ ಸಲ್ಲಿಸಿದೆ. ಈ ಅರ್ಜಿಯಲ್ಲಿ ಕರ್ನಾಟಕದ ಜತೆಗೆ ಕೇರಳ ಮತ್ತು ಪುದುಚೇರಿಯನ್ನೂ ಪ್ರತಿವಾದಿಗಳನ್ನಾಗಿ ಸೇರಿಸಲಾಗಿದೆ.

ಹೊಸ ಅರ್ಜಿ ಸಲ್ಲಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಸುಪ್ರೀಂಕೋರ್ಟ್ ಪೀಠ, ತಮಿಳುನಾಡು ಪರ ವಕೀಲರನ್ನು ಉದ್ದೇಶಿಸಿ, "ಇನ್ನೆಷ್ಟು ಅರ್ಜಿಗಳನ್ನು ಸಲ್ಲಿಸುತ್ತೀರಿ?" ಎಂದು ಕಾರ್ಯದರ್ಶಿಗಳಿಗೆ ವಹಿಸುವಂತೆ ನಿರ್ದೇಶನ ನೀಡಿದರು. ರಾಜ್ಯದ ಎಲ್ಲ 5,927 ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಹಾಜರಿದ್ದು, ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ಪರಿಹಾರ ಒದಗಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ ಸಿಇಒಗಳು ಅಗತ್ಯ ಕ್ರಮ ಕೈಗೊಂಡು ಮೇಲ್ವಿಚಾರಣೆ ನಡೆಸಬೇಕು ಎಂದು ತಿಳಿಸಿದರು.



ಪಿಡಿಓಗಳು, ಪಂಚಾಯಿತಿ ಕಾರ್ಯದರ್ಶಿಗಳು ಹಾಗೂ ಇತರ ಸಿಬ್ಬಂದಿ ಎಲ್ಲ ಕೆಲಸದ ದಿನಗಳಂದು ಕಚೇರಿಗೆ ಕಡ್ಡಾಯವಾಗಿ ಹಾಜರಾಗಬೇಕು. ಈ ಸಂಬಂಧ ಕರ್ತವ್ಯ ಆಪ್‌ನಲ್ಲಿ ಹಾಜರಾತಿ ದಾಖಲಿಸುವುದನ್ನು ಕಡ್ಡಾಯಗೊಳಿಸಿ ಸುತ್ತೋಲೆ ಹೊರಡಿಸುವಂತೆ ಸಚಿವರು ಸೂಚಿಸಿದರು. ಪಂಚಾಯಿತಿ ಸಿಬ್ಬಂದಿಯ ಸಮಯಪಾಲನೆ ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ಹೊಣೆಗಾರಿಕೆ ಹೆಚ್ಚಿಸುವುದು ಇದರ ಉದ್ದೇಶವಾಗಿದೆ ಎಂದರು.

ಗ್ರಾಮ ಪಂಚಾಯಿತಿಗಳಿಂದ ಗ್ರಾಮಗಳಲ್ಲಿ ಸೃಷ್ಟಿಸಲಾದ ಆಸ್ತಿಗಳು, ಕೊಳವೆಬಾವಿಗಳು ಸೇರಿದಂತೆ ಸಾರ್ವಜನಿಕ ಆಸ್ತಿಗಳನ್ನು ಪ್ರಭಾವಿ ವ್ಯಕ್ತಿಗಳು ಅತಿಕ್ರಮಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಪಂಚಾಯಿತಿಗೆ ಸೇರಿದ ಎಲ್ಲ ಆಸ್ತಿಗಳಿಗೆ ಜಿಯೋ ಟ್ಯಾಗಿಂಗ್ ಮಾಡಿ, ಅವುಗಳ ಸಮರ್ಪಕ ಸಂರಕ್ಷಣೆಗೆ ಕ್ರಮ ವಹಿಸಬೇಕು ಎಂದು ಈಶ್ವರ ಖಂಡ್ರೆ ನಿರ್ದೇಶನ ನೀಡಿದರು.

ಜತೆಗೆ ಎಲ್ಲ ಜಿಲ್ಲೆಗಳಲ್ಲಿ ಅಭಿಲೇಖಾಲಯಗಳನ್ನು (ದಾಖಲೆ ಕೊಠಡಿ) ಸಮರ್ಪಕವಾಗಿ ನಿರ್ವಹಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ ಅವರು, ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಕಡತಗಳ ನಿರ್ವಹಣೆಗೆ ಮೊದಲ ಆದ್ಯತೆ ನೀಡಬೇಕು. ಗ್ರಾಮೀಣ ಪ್ರದೇಶಗಳ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ಸುರಕ್ಷಿತವಾಗಿ ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. 3ನೇ ಪುಟಕ್ಕೆ...

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಭಾರೀ ಫಂಡ್: ಸಿಎಂ ಚಾಲನೆ



● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯದ ಗ್ರಾಮೀಣ ಪ್ರದೇಶಗಳ ಚಿತ್ರಣ ಬದಲಿಸುವ ಉದ್ದೇಶದಿಂದ ಸರ್ಕಾರ 16 ಸಾವಿರ ಕೋಟಿ ರೂ. ಮೊತ್ತದ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದೆ. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಸಂಪರ್ಕ ಯೋಜನೆಯಡಿ ಸುಮಾರು 15 ಸಾವಿರ ಕಿ.ಮೀ. ರಸ್ತೆ ಅಭಿವೃದ್ಧಿಗೆ 10 ಸಾವಿರ ಕೋಟಿ ರೂ. ಹಾಗೂ ಪಂಚಾಯಿತಿ ಮಟ್ಟದ ಅಭಿವೃದ್ಧಿ ಕಾಮಗಾರಿಗಳಿಗೆ 6 ಸಾವಿರ ಕೋಟಿ ರೂ. ಮೀಸಲಿಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ 'ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಸಂಪರ್ಕ ಯೋಜನೆ' ಮತ್ತು 'ಮುಖ್ಯಮಂತ್ರಿ ಗ್ರಾಮೀಣಾಭಿವೃದ್ಧಿ ಯೋಜನೆ'ಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. "ಇಷ್ಟು ದೊಡ್ಡ ಮೊತ್ತದ ಅನುದಾನ ನೀಡಿರುವುದು ಗುತ್ತಿಗೆದಾರರ ಉದ್ಧಾರಕ್ಕಾಗಿ ಅಥವಾ ಅವರ ಜೇಬು ತುಂಬಿಸುವುದಕ್ಕಾಗಿ ಅಲ್ಲ. ಗ್ರಾಮೀಣ ಜನರ ಬದುಕು ಬದಲಿಸುವ ಉದ್ದೇಶದಿಂದ ಈ ಹಣ ವಿನಿಯೋಗಿಸಲಾಗುತ್ತಿದೆ. ಅನುದಾನದಲ್ಲಿ ಒಂದು ರೂಪಾಯಿಯೂ ದುರುಪಯೋಗ ವಾಗಬಾರದು. ಕಾಮಗಾರಿಗಳಲ್ಲಿ ಪಾರ ದರ್ಶಕತೆ ಮತ್ತು ಗುಣಮಟ್ಟ ಕಡ್ಡಾಯವಾಗಿರ ಬೇಕು" ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. 3ನೇ ಪುಟಕ್ಕೆ...

ಪಿಡಿಓಗಳಿಗೆ ಹೆಚ್ಚುವರಿ ಜವಾಬ್ದಾರಿ ಬೇಡ: ಸಚಿವ ಖಂಡ್ರೆ ಸೂಚನೆ

● ವಿಕ್ರಮ ವಾಹಿನಿ । ಬೆಂಗಳೂರು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಓ) ಎರಡು-ಮೂರು ಗ್ರಾಮ ಪಂಚಾಯಿತಿಗಳ ಹೆಚ್ಚುವರಿ ಹೊಣೆಗಾರಿಕೆ ನೀಡುವ ಬದಲು, ಆಯಾ ಪಂಚಾಯಿತಿಗಳ ಗ್ರೇಡ್-1 ಕಾರ್ಯದರ್ಶಿಗಳಿಗೆ ಹೆಚ್ಚುವರಿ ಜವಾಬ್ದಾರಿ ವಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಕಾಸಸೌಧದಲ್ಲಿ ಶುಕ್ರವಾರ ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ (ಸಿಇಒ) ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಪಿಡಿಓಗಳಿಗೆ ಎರಡರಿಂದ ಮೂರು ಗ್ರಾಮ ಪಂಚಾಯಿತಿಗಳ ಜವಾಬ್ದಾರಿ ನೀಡುವುದರಿಂದ ಯಾವುದೇ ಪಂಚಾಯಿತಿಗೂ ಸಮರ್ಪಕ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಹೆಚ್ಚುವರಿ ಹೊಣೆಗಾರಿಕೆಯನ್ನು ಆಯಾ ಪಂಚಾಯಿತಿಗಳ ಗ್ರೇಡ್-1 ಕಾರ್ಯದರ್ಶಿಗಳಿಗೆ ವಹಿಸುವಂತೆ ನಿರ್ದೇಶನ ನೀಡಿದರು. ರಾಜ್ಯದ ಎಲ್ಲ 5,927 ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಹಾಜರಿದ್ದು, ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ಪರಿಹಾರ ಒದಗಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ ಸಿಇಒಗಳು ಅಗತ್ಯ ಕ್ರಮ ಕೈಗೊಂಡು ಮೇಲ್ವಿಚಾರಣೆ ನಡೆಸಬೇಕು ಎಂದು ತಿಳಿಸಿದರು.

ಪಿಡಿಓಗಳು, ಪಂಚಾಯಿತಿ ಕಾರ್ಯದರ್ಶಿಗಳು ಹಾಗೂ ಇತರ ಸಿಬ್ಬಂದಿ ಎಲ್ಲ ಕೆಲಸದ ದಿನಗಳಂದು ಕಚೇರಿಗೆ ಕಡ್ಡಾಯವಾಗಿ ಹಾಜರಾಗಬೇಕು. ಈ ಸಂಬಂಧ ಕರ್ತವ್ಯ ಆಪ್‌ನಲ್ಲಿ ಹಾಜರಾತಿ ದಾಖಲಿಸುವುದನ್ನು ಕಡ್ಡಾಯಗೊಳಿಸಿ ಸುತ್ತೋಲೆ ಹೊರಡಿಸುವಂತೆ ಸಚಿವರು ಸೂಚಿಸಿದರು. ಪಂಚಾಯಿತಿ ಸಿಬ್ಬಂದಿಯ ಸಮಯಪಾಲನೆ ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ಹೊಣೆಗಾರಿಕೆ ಹೆಚ್ಚಿಸುವುದು ಇದರ ಉದ್ದೇಶವಾಗಿದೆ ಎಂದರು.

ಗ್ರಾಮ ಪಂಚಾಯಿತಿಗಳಿಂದ ಗ್ರಾಮಗಳಲ್ಲಿ ಸೃಷ್ಟಿಸಲಾದ ಆಸ್ತಿಗಳು, ಕೊಳವೆಬಾವಿಗಳು ಸೇರಿದಂತೆ ಸಾರ್ವಜನಿಕ ಆಸ್ತಿಗಳನ್ನು ಪ್ರಭಾವಿ ವ್ಯಕ್ತಿಗಳು ಅತಿಕ್ರಮಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಪಂಚಾಯಿತಿಗೆ ಸೇರಿದ ಎಲ್ಲ ಆಸ್ತಿಗಳಿಗೆ ಜಿಯೋ ಟ್ಯಾಗಿಂಗ್ ಮಾಡಿ, ಅವುಗಳ ಸಮರ್ಪಕ ಸಂರಕ್ಷಣೆಗೆ ಕ್ರಮ ವಹಿಸಬೇಕು ಎಂದು ಈಶ್ವರ ಖಂಡ್ರೆ ನಿರ್ದೇಶನ ನೀಡಿದರು.

ಜತೆಗೆ ಎಲ್ಲ ಜಿಲ್ಲೆಗಳಲ್ಲಿ ಅಭಿಲೇಖಾಲಯಗಳನ್ನು (ದಾಖಲೆ ಕೊಠಡಿ) ಸಮರ್ಪಕವಾಗಿ ನಿರ್ವಹಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ ಅವರು, ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಕಡತಗಳ ನಿರ್ವಹಣೆಗೆ ಮೊದಲ ಆದ್ಯತೆ ನೀಡಬೇಕು. ಗ್ರಾಮೀಣ ಪ್ರದೇಶಗಳ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ಸುರಕ್ಷಿತವಾಗಿ ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. 3ನೇ ಪುಟಕ್ಕೆ...

ಜಪಾನ್‌ಗೆ ಡಿಕೆಶಿ ನಿಯೋಗ

● ವಿಕ್ರಮ ವಾಹಿನಿ । ಬೆಂಗಳೂರು

ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಮಟ್ಟದ ನಿಯೋಗವು ನವೆಂಬರ್ 23 ರಿಂದ 25 ರವರೆಗೆ ಜಪಾನ್ ಪ್ರವಾಸ ಕೈಗೊಳ್ಳಲಿದೆ.

ನವೆಂಬರ್ 23 ರಂದು ನಗೋಯಾ, ನವೆಂಬರ್ 24 ರಂದು ಒಸಾಕಾ ಹಾಗೂ ನವೆಂಬರ್ 25 ರಂದು ಟೋಕಿಂ ನೊದಲ್ಲಿ ಮುಖ್ಯಮಂತ್ರಿಗಳು ವಿವಿಧ ಕಾರ್ಯ ಕ್ರಮಗಳಲ್ಲಿ ಭಾಗವಹಿ ಸಲಿದ

ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

ಶ್ರೀ ವಿಜಯದಾಸರ ಕೊಡುಗೆಯ ಬಹುಮುಖ ಆಯಾಮಗಳು;

ದಾಸಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಅವರ ಅಮೂಲ್ಯ ಕೊಡುಗೆ



ವಿದ್ಯಾವಾಚಸ್ಪತಿ
ಡಾ.ಅರಳುಮಲ್ಲಿಗೆ ಪಾರ್ಥಸಾರಥಿ

ದಾಸಪರಂಪರೆಯು ಕೇವಲ ವೈಯಕ್ತಿಕ ಭಕ್ತಿಯ ಅಭಿವ್ಯಕ್ತಿಯಾಗಿ ಉಳಿಯದೆ, ಗುರುಪರಂಪರೆ, ತತ್ವಪ್ರಸಾರ, ಸಂಕೀರ್ತನೆ ಮತ್ತು ಸಾಮೂಹಿಕ ಆಧ್ಯಾತ್ಮಿಕ ಜಾಗೃತಿಯ ಚಳವಳಿಯಾಗಿ ಬೆಳೆಯಲು ಅವರು ಪ್ರೇರಕಶಕ್ತಿಯಾದರು. ಅವರಿಂದ ಪ್ರೇರಣೆ ಪಡೆದ ದಾಸವರೇಣ್ಯರ ಮೂಲಕ ಭಕ್ತಿಯ ಈ ಜ್ಞಾನಗಂಗೆ ಕರ್ನಾಟಕದಾದ್ಯಂತ ಹರಿದು, ಮುಂದಿನ ಶತಮಾನಗಳಿಗೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿತು.

ಶ್ರೀ ವಿಜಯದಾಸರ ವ್ಯಕ್ತಿತ್ವ ಮತ್ತು ಸಾಧನೆಗಳು ಹರಿದಾಸ ಪರಂಪರೆಯ ಇತಿಹಾಸದಲ್ಲಿ ಒಂದು ಸುವರ್ಣ ಅಧ್ಯಾಯವಷ್ಟೇ ಅಲ್ಲ, ಕನ್ನಡ ಸಾಹಿತ್ಯ, ಭಕ್ತಿ ತತ್ವ, ಅಧ್ಯಾತ್ಮ ಸಾಧನೆ ಹಾಗೂ ಸಾಂಸ್ಕೃತಿಕ ಪುನರುಜ್ಜೀವನದ ಮಹತ್ವದ ಮೈಲಿಗಲ್ಲುಗಳಾಗಿವೆ. ಅವರ ಕೊಡುಗೆಯ ಮೊದಲ ಆಯಾಮವೆಂದರೆ ದಾಸಸಾಹಿತ್ಯಕ್ಕೆ ನೀಡಿದ ಅಪೂರ್ವ ಸಾಹಿತ್ಯಿಕ ಶ್ರೀಮಂತಿಕೆ.

ಸರಳವಾದ ಜನಭಾಷೆಯಲ್ಲಿ ಗಂಭೀರವಾದ ವೇದಾಂತ ತತ್ತ್ವಗಳನ್ನು ಅಭಿವ್ಯಕ್ತಿಸುವ ಅದ್ಭುತ ಸಾಮರ್ಥ್ಯ ಅವರಲ್ಲಿತ್ತು. ಅವರ ಕೀರ್ತನೆಗಳಲ್ಲಿ ಭಾಷೆಯ ಲಾಲಿತ್ಯ, ಪದಗಳ ಪ್ರೌಢಿಮೆ, ಭಾವದ ಆಳ, ಅರ್ಥದ ಗಾಂಭೀರ್ಯ ಮತ್ತು ಕಾವ್ಯಸೌಂದರ್ಯಗಳು ಸಮನ್ವಯಗೊಂಡಿವೆ.


ಪಾಂಡಿತ್ಯದ ಗಂಭೀರತೆಯನ್ನು ಜನಸಾಮಾನ್ಯರ ಹೃದಯಕ್ಕೆ ತಲುಪಿಸುವ ಸಾಹಿತ್ಯಿಕ ಸೇತುವೆಯಾಗಿ ಅವರ ರಚನೆಗಳು ರೂಪುಗೊಂಡಿವೆ. ಹೀಗಾಗಿ ವಿಜಯದಾಸರು ಕನ್ನಡ ಸಾಹಿತ್ಯದ ಭಕ್ತಿ ಪರಂಪರೆಗೆ ವಿಶಿಷ್ಟವಾದ ಘನತೆಯನ್ನು ತಂದುಕೊಟ್ಟ ಮಹಾನ್ ಕವಿಗಳಲ್ಲಿ ಅಗ್ರಗಣ್ಯರಾಗಿದ್ದಾರೆ.

ಅವರ ಎರಡನೆಯ ಮಹತ್ವದ ಆಯಾಮ ಮಧ್ವಸಿದ್ಧಾಂತ ಮತ್ತು ತತ್ತ್ವಜ್ಞಾನದ ಜನಪ್ರಿಯ ಪ್ರಸಾರ. ವೇದ, ಉಪನಿಷತ್ತು, ಪುರಾಣ, ಇತಿಹಾಸ ಮತ್ತು ಶ್ರೀಮದಾಚಾರ್ಯರ ದ್ವೈತ ವೇದಾಂತದ ಸಾರವನ್ನು ತಮ್ಮ ಕೀರ್ತನೆಗಳ ಮೂಲಕ ಜನಸಾಮಾನ್ಯರಿಗೆ ಪರಿಚಯಿಸಿದವರು ವಿಜಯದಾಸರು. ಜೀವ, ಜಗತ್ತು ಮತ್ತು ಪರಮಾತ್ಮನ ನಡುವಿನ ತಾತ್ತ್ವಿಕ ಸಂಬಂಧ, ಹರಿಯ ಸರ್ವೋತ್ತಮತ್ವ, ಭಕ್ತಿಯ ಮಹತ್ವ, ಕರ್ಮ ಮತ್ತು ಜ್ಞಾನಗಳ ಸ್ವರೂಪ ಹಾಗೂ ಮೋಕ್ಷದ ಪರಮಗುರಿ ಇವುಗಳನ್ನು ಅತ್ಯಂತ ಸರಳವಾಗಿಯೂ ಅರ್ಥಗರ್ಭಿತವಾಗಿಯೂ ನಿರೂಪಿಸಿದರು. ಕೇವಲ ಭಾವನಾತ್ಮಕ ಭಕ್ತಿಗೆ ಸೀಮಿತವಾಗದೆ, ಶಾಸ್ತ್ರಾಧಾರಿತವಾದ ತತ್ತ್ವನಿಷ್ಠ ಭಕ್ತಿಗೆ ಅವರು ವಿಶೇಷ ಒತ್ತು ನೀಡಿದರು. ಈ ದೃಷ್ಟಿಯಿಂದ ಅವರ ಸಾಹಿತ್ಯವು ಭಕ್ತಿಗೀತೆಗಳ ಸಂಗ್ರಹ ಮಾತ್ರವಲ್ಲ; ಸಾಮಾನ್ಯ ಜನರಿಗೂ ವೇದಾಂತದ ದರ್ಶನ ಮಾಡಿಸುವ ಚಿಂತನಸಂಪನ್ನ ಆಧ್ಯಾತ್ಮಿಕ ವಿಶ್ವವಿದ್ಯಾಲಯವಾಗಿದೆ.

ಮೂರನೆಯ ಆಯಾಮ ಸಮಾಜಮುಖಿ ಚಿಂತನೆ ಮತ್ತು ಮಾನವೀಯ ಮೌಲ್ಯಗಳ ಪ್ರತಿಷ್ಠಾಪನೆ. ವಿಜಯದಾಸರ ಕೀರ್ತನೆಗಳು ಮನುಷ್ಯನ ಅಂತರಂಗವನ್ನು ಶುದ್ಧೀಕರಿಸುವುದರ ಜೊತೆಗೆ ಅವನ ಸಾಮಾಜಿಕ ಬದುಕಿಗೂ ಮಾರ್ಗದರ್ಶನ ನೀಡುತ್ತವೆ. ಅಹಂಕಾರ, ಅಸೂಯೆ, ದುರಾಸೆ, ದಂಭ, ಕಪಟ ಮತ್ತು ಅಜ್ಞಾನಗಳ ವಿರುದ್ಧ ಅವರು ತಮ್ಮ ರಚನೆಗಳ ಮೂಲಕ ಎಚ್ಚರಿಕೆಯ ಸಂದೇಶ ನೀಡಿದರು. ವಿನಯ, ಸತ್ಯ, ದಯೆ, ಪರೋಪಕಾರ, ಸಜ್ಜನಸಂಗ, ಆತ್ಮಾವಲೋಕನ ಮತ್ತು ನೈತಿಕ ನಡವಳಿಕೆಗಳಿಗೆ ಮಹತ್ವ ನೀಡಿದರು.

ಬಾಹ್ಯ ಆಡಂಬರಕ್ಕಿಂತ ಅಂತರಂಗದ ಪರಿಶುದ್ಧತೆ ಶ್ರೇಷ್ಠವೆಂಬುದನ್ನು ಪ್ರತಿಪಾದಿಸಿದರು. ಭಕ್ತಿ ಎನ್ನುವುದು ಕೇವಲ ಪೂಜೆ, ಪುರಸ್ಕಾರ ಅಥವಾ ಆಚರಣೆಗೆ ಸೀಮಿತವಲ್ಲ; ಅದು ವ್ಯಕ್ತಿಯ ಚಿಂತನೆ, ಮಾತು ಮತ್ತು ನಡವಳಿಕೆಯಲ್ಲಿ ಪ್ರತಿಫಲಿಸಬೇಕಾದ ಜೀವನಮೌಲ್ಯ ಎಂಬ ಉದಾತ್ತ ಸಂದೇಶವನ್ನು ಸಾರಿದರು. ಈ ಕಾರಣದಿಂದ ವಿಜಯದಾಸರ ಸಾಹಿತ್ಯವು ಕಾಲಾತೀತವಾದ ಸಾಮಾಜಿಕ ಮತ್ತು ನೈತಿಕ ಪ್ರಸ್ತುತತೆಯನ್ನು ಹೊಂದಿದೆ.

ನಾಲ್ಕನೆಯ ಆಯಾಮ ಹರಿದಾಸ ಪರಂಪರೆಯ ಸಂಘಟನೆ, ಗುರುಶಿಷ್ಯ ಪರಂಪರೆಯ ಪೋಷಣೆ ಮತ್ತು ಭಕ್ತಿಚಳವಳಿಯ ವಿಸ್ತರಣೆ. ವಿಜಯದಾಸರು ಸ್ವತಃ ಮಹಾನ್ ಹರಿದಾಸರಾಗಿದ್ದುದಷ್ಟೇ ಅಲ್ಲದೆ, ಮುಂದಿನ ಪೀಳಿಗೆಯ ದಾಸವರೇಣ್ಯರಿಗೆ ಮಾರ್ಗದರ್ಶನ ನೀಡಿದ



ಆಧ್ಯಾತ್ಮಿಕ ಗುರುಗಳೂ ಆಗಿದ್ದರು. ಗೋಪಾಲದಾಸರು, ಜಗನ್ನಾಥದಾಸರು ಮೊದಲಾದ ಮಹನೀಯರ ಆಧ್ಯಾತ್ಮಿಕ ಜೀವನ ಮತ್ತು ದಾಸಸಾಹಿತ್ಯದ ಬೆಳವಣಿಗೆಯಲ್ಲಿ ಅವರ ಪ್ರಭಾವ ಮಹತ್ವದ್ದಾಗಿದೆ. ದಾಸಪರಂಪರೆಯು ಕೇವಲ ವೈಯಕ್ತಿಕ ಭಕ್ತಿಯ ಅಭಿವ್ಯಕ್ತಿಯಾಗಿ ಉಳಿಯದೆ, ಗುರುಪರಂಪರೆ, ತತ್ವಪ್ರಸಾರ, ಸಂಕೀರ್ತನೆ ಮತ್ತು ಸಾಮೂಹಿಕ ಆಧ್ಯಾತ್ಮಿಕ ಜಾಗೃತಿಯ ಚಳವಳಿಯಾಗಿ ಬೆಳೆಯಲು ಅವರು ಪ್ರೇರಕಶಕ್ತಿಯಾದರು. ಅವರಿಂದ ಪ್ರೇರಣೆ ಪಡೆದ ದಾಸವರೇಣ್ಯರ ಮೂಲಕ ಭಕ್ತಿಯ ಈ ಜ್ಞಾನಗಂಗೆ ಕರ್ನಾಟಕದಾದ್ಯಂತ ಹರಿದು, ಮುಂದಿನ ಶತಮಾನಗಳಿಗೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿತು.

ಐದನೆಯ ಹಾಗೂ ಅತ್ಯಂತ ಮಹತ್ವದ ಆಯಾಮ ನಾಮಸಂಕೀರ್ತನೆಯ ಮಹಿಮೆ, ಆತ್ಮೋನ್ನತಿ ಮತ್ತು ಮೋಕ್ಷಸಾಧನೆಯ ಮಾರ್ಗದರ್ಶನ. ವಿಜಯದಾಸರ ದೃಷ್ಟಿಯಲ್ಲಿ ಭಗವಂತನ ನಾಮಸ್ಮರಣೆ ಮನುಷ್ಯನ ಬದುಕಿಗೆ ಪಾವಿತ್ರ್ಯವನ್ನು ನೀಡುವ, ಮನಸ್ಸನ್ನು ಪರಿಶುದ್ಧಗೊಳಿಸುವ ಮತ್ತು ಪರಮಾತ್ಮನ ಅನುಗ್ರಹಕ್ಕೆ ಪಾತ್ರವಾಗಿಸುವ ಶ್ರೇಷ್ಠ ಸಾಧನವಾಗಿದೆ. ಅವರ ಕೀರ್ತನೆಗಳು ಭಕ್ತನನ್ನು ಕೇವಲ ಭಾವಪರವಶತೆಯಲ್ಲಿ ತೇಲಿಸುವುದಿಲ್ಲ; ಅವನನ್ನು ಆತ್ಮವಿಮರ್ಶೆ, ತತ್ತ್ವಚಿಂತನೆ, ಶರಣಾಗತಿ ಮತ್ತು ಭಗವದನುಸಂಧಾನದ ಉನ್ನತ ನೆಲೆಗಳಿಗೆ ಕರೆದೊಯ್ಯುತ್ತವೆ. ವೈಯಕ್ತಿಕ ಸಾಧನೆಯಿಂದ ಸಾಮೂಹಿಕ ಭಕ್ತಿಯವರೆಗೆ, ಸಾಹಿತ್ಯದ ಸೌಂದರ್ಯದಿಂದ ತತ್ವದ ಗಾಂಭೀರ್ಯದವರೆಗೆ, ಜನ ಜೀವನದ ಮೌಲ್ಯಗಳಿಂದ ಪರಮಾರ್ಥದ ಚಿಂತನೆಯವರೆಗೆ ಅವರ ಕೊಡುಗೆ ವ್ಯಾಪಿಸಿದೆ. ಆದ್ದರಿಂದ ಶ್ರೀ ವಿಜಯದಾಸರು ಒಬ್ಬ ಕೀರ್ತನಕಾರರಾಗಿ ಮಾತ್ರವಲ್ಲದೆ, ಕನ್ನಡ ನಾಡಿನ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತ ಗೊಳಿಸಿದ ಮಹಾನ್ ತತ್ತ್ವಜ್ಞಾನಿ, ಸಮಾಜಚಿಂತಕ, ಗುರು ಮತ್ತು ಯುಗಪ್ರವರ್ತಕ ಹರಿದಾಸರಾಗಿ ಸದಾ ಸ್ಮರಣೀಯರು.

ವಿಜಯದಾಸರ ಮಹತ್ವವನ್ನು ಅವರ ಕೀರ್ತನೆಗಳ ಸಂಖ್ಯೆಯಿಂದ ಮಾತ್ರ ಅಳೆಯಲಾಗದು; ಅವರು ರೂಪಿಸಿದ ಭಕ್ತಿಪ್ರಜ್ಞೆ, ಬಿತ್ತಿದ ತತ್ತ್ವಬೀಜ, ಬೆಳೆಸಿದ ಗುರುಪರಂಪರೆ ಮತ್ತು ಸಮಾಜಕ್ಕೆ ನೀಡಿದ ಮೌಲ್ಯಪ್ರಜ್ಞೆಯ ಮೂಲಕವೇ ಅವರ ಯುಗಪ್ರವರ್ತಕ ವ್ಯಕ್ತಿತ್ವದ ಪೂರ್ಣತೆಯನ್ನು ಅರಿಯಲು ಸಾಧ್ಯ.

ಮಧುಮೇಹ, ಆನುವಂಶಿಕ ಕಾಯಿಲೆಗಳು ಮತ್ತು ಮುಂದಿನ ತಲೆಮಾರಿನ ಆರೋಗ್ಯ ಪರಿಹಾರಗಳ ಸಂಶೋಧನೆಯಲ್ಲಿ ಭಾರತ ಜಾಗತಿಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ: ಡಾ. ಜಿತೇಂದ್ರ ಸಿಂಗ್

● ವಿಕ್ರಮ ವಾಹಿನಿ । ನವದೆಹಲಿ

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಪ್ರಸ್ತುತ ಮಧುಮೇಹಕ್ಕೆ ಸಂಬಂಧಿಸಿದ ಹನ್ನೆರಡಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳು ಪ್ರಗತಿಯಲ್ಲಿದ್ದು, ಇವುಗಳಲ್ಲಿ ಹೆಚ್ಚಿನವು ಜೈವಿಕ ತಂತ್ರಜ್ಞಾನ ಇಲಾಖೆ (ಡಿಬಿಟಿ) ಮೂಲಕ ಹಾಗೂ ಕೆಲವು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್) ಮೂಲಕ ನಡೆಯುತ್ತಿವೆ. ಈ ಮೂಲಕ ಮಧುಮೇಹ, ಆನುವಂಶಿಕ ಕಾಯಿಲೆಗಳು ಮತ್ತು ಮುಂದಿನ ತಲೆಮಾರಿನ ಆರೋಗ್ಯ ಪರಿಹಾರಗಳ ಸಂಶೋಧನೆಯಲ್ಲಿ ಭಾರತ ಜಾಗತಿಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ ಎಂದು ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಇಂದು ಹೇಳಿದರು.

ಮುಂದಿನ ತಲೆಮಾರಿನ ಆಣ್ವಿಕ ಮತ್ತು ಆನುವಂಶಿಕ ಪರಿಹಾರಗಳ ಮೂಲಕ ಮಧುಮೇಹವನ್ನು ತಡೆಗಟ್ಟುವ ಹಾಗೂ ನಿಯಂತ್ರಿಸುವ ನಿಟ್ಟಿನಲ್ಲಿ ಸಂಶೋಧನೆ ಹೆಚ್ಚು ಗಮನಹರಿಸುತ್ತಿದೆ ಎಂದು ಒತ್ತಿಹೇಳಿದ ಡಾ. ಸಿಂಗ್, ಭಾರತದ ಬೃಹತ್ ಜನಸಂಖ್ಯೆ ಮತ್ತು ಆನುವಂಶಿಕ ವೈವಿಧ್ಯತೆಯು ದೇಶಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೂ ಉಪಯುಕ್ತವಾಗಬಲ್ಲ ವೈಜ್ಞಾನಿಕ ಒಳನೋಟಗಳು ಮತ್ತು ಆರೋಗ್ಯ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ವಿಶಿಷ್ಟ ಅವಕಾಶವನ್ನು ಒದಗಿಸಿವೆ ಎಂದರು. ಭಾರತದ ಯುವಜನರಲ್ಲಿ ಸ್ಥೂಲಕಾಯ ಮತ್ತು ಮಧುಮೇಹವನ್ನು ತಡೆಗಟ್ಟುವುದು ಕೇವಲ ವೈದ್ಯಕೀಯ ಸವಾಲಲ್ಲ, ಅದೊಂದು ರಾಷ್ಟ್ರೀಯ ಹೊಣೆಗಾರಿಕೆಯಾಗಿದೆ. ಇದಕ್ಕಾಗಿ ಆರೋಗ್ಯ ಕ್ಷೇತ್ರದವರಷ್ಟೇ ಅಲ್ಲದೆ, ಎಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕಿದೆ ಎಂದು ಅವರು ಹೇಳಿದರು.

ನವೆಂಬರ್ 19ರಿಂದ 22ರವರೆಗೆ ಬೆಂಗಳೂರಿನಲ್ಲಿ ನಡೆಯುತ್ತಿರುವ 'ಆರ್‌ಎಸ್‌ಎಸ್‌ಡಿಐ 2026' ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಡಾ. ಜಿತೇಂದ್ರ ಸಿಂಗ್ ಮಾತನಾಡಿದರು. ಈ ಸಮ್ಮೇಳನದಲ್ಲಿ ದೇಶದ ವಿವಿಧ ಭಾಗಗಳು ಹಾಗೂ ವಿದೇಶಗಳಿಂದ ಪ್ರಮುಖ ಮಧುಮೇಹ ತಜ್ಞರು, ವೈದ್ಯರು, ಸಂಶೋಧಕರು, ಶಿಕ್ಷಣ ತಜ್ಞರು ಮತ್ತು ಆರೋಗ್ಯ ವೃತ್ತಿಪರರು ಭಾಗವಹಿಸಿದ್ದಾರೆ.

ಕರ್ನಾಟಕ ಸರ್ಕಾರದ ಬೃಹತ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣ ಬೈರೇಗೌಡ ಹಾಗೂ ಸಂಸದ ಡಾ. ಸಿ. ಎನ್. ಮಂಜುನಾಥ್ ಸೇರಿದಂತೆ ಹಲವು ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಫೆಲೋಶಿಪ್‌ಗಳ ವಿತರಣೆ, ಪ್ರಶಸ್ತಿ ಪುರಸ್ಕೃತರಿಗೆ ಗೌರವ ಸಮರ್ಪಣೆ ಹಾಗೂ ಪುಸ್ತಕಗಳು ಮತ್ತು ಮಾರ್ಗಸೂಚಿಗಳ ಬಿಡುಗಡೆಗಳೂ ನಡೆದವು.

ಭಾರತದ ವೈಜ್ಞಾನಿಕ ಮತ್ತು ಆರೋಗ್ಯ ಕ್ಷೇತ್ರದ ಸಾಮರ್ಥ್ಯಗಳಲ್ಲಿ ಮಹತ್ವದ ಪರಿವರ್ತನೆಯಾಗಿದೆ. ಈ ಹಿಂದೆ ಹೊರಗಿನ ಪರಿಹಾರಗಳನ್ನು ಅವಲಂಬಿಸಿದ್ದ ಭಾರತ ಈಗ ಸ್ವದೇಶಿ ಲಸಿಕೆಗಳು, ಚಿಕಿತ್ಸಾ ವಿಧಾನಗಳು, ಪ್ರತಿಜೀವಕಗಳು (ಆಂಟಿಬಯೋಟಿಕ್ಸ್) ಮತ್ತು ಸುಧಾರಿತ ವೈದ್ಯಕೀಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಸಚಿವರು ಹೇಳಿದರು. ಭಾರತದ ಡಿಎನ್‌ಎ ಆಧಾರಿತ ಕೋವಿಡ್-19 ಲಸಿಕೆ, ಸ್ವದೇಶಿ ಆಂಟಿಬಯೋಟಿಕ್ಸ್, ಆನುವಂಶಿಕ ಚಿಕಿತ್ಸೆಗಳ ಸಂಶೋಧನೆ, ಬಯೋಸಿಮಿಲರ್‌ಗಳು ಮತ್ತು 'ಇಂಡಿಯಾ ಜೀನೋಮ್ ಸ್ಟಡಿ'ಯನ್ನು ಉಲ್ಲೇಖಿಸಿದ ಅವರು, ನವೀನ ವಿಧಾನಗಳ ಮೂಲಕ ಸಂಕೀರ್ಣ ಆರೋಗ್ಯ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುತ್ತಿರುವ ಭಾರತದ ಸಂಶೋಧನಾ ವ್ಯವಸ್ಥೆಯು ದೇಶವನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಮುಂಚೂಣಿಯ ಕೊಡುಗೆದಾರನನ್ನಾಗಿ ರೂಪಿಸಿದೆ ಎಂದರು. ಎಚ್‌ಪಿವಿ, ಡೆಂಗ್ಯೂ ಮತ್ತು ಮಲೇರಿಯಾದಂತಹ ಕಾಯಿಲೆಗಳ ವಿರುದ್ಧದ ಲಸಿಕೆ ಅಭಿವೃದ್ಧಿ ಪ್ರಕ್ರಿಯೆ ಹಾಗೂ ಆನುವಂಶಿಕ ಚಿಕಿತ್ಸಾ ಕ್ಷೇತ್ರದಲ್ಲಿನ ಪ್ರಗತಿಯನ್ನೂ ಅವರು ಉಲ್ಲೇಖಿಸಿದರು. ಇವೆಲ್ಲವೂ ಭಾರತದ ಜೈವಿಕ ವೈದ್ಯಕೀಯ ಸಂಶೋಧನೆಯ ವಿಸ್ತರಿಸುತ್ತಿರುವ ವ್ಯಾಪ್ತಿಯನ್ನು ತೋರಿಸುತ್ತವೆ ಎಂದರು.

ನಿಖರ ವೈದ್ಯಕೀಯ ಚಿಕಿತ್ಸೆ ಮತ್ತು ಆಣ್ವಿಕ ಮಟ್ಟದ ಚಿಕಿತ್ಸಾ ವಿಧಾನಗಳ ಮೇಲೆ ಹೆಚ್ಚುತ್ತಿರುವ ಗಮನವು ಟೈಪ್-2 ಮಧುಮೇಹ, ಅದಕ್ಕೆ ಸಂಬಂಧಿಸಿದ ಚಯಾಪಚಯ ಅಸ್ವಸ್ಥತೆಗಳು ಹಾಗೂ ಅವುಗಳನ್ನು ತಡೆಗಟ್ಟುವ ಮಾರ್ಗಗಳನ್ನು ಅರ್ಥಮಾಡಿಕೊಳ್ಳಲು ಹೊಸ ಅವಕಾಶಗಳನ್ನು ತೆರೆದಿದೆ. ವಿಶೇಷವಾಗಿ ಯುವಜನರಲ್ಲಿ ಇಂತಹ ಕಾಯಿಲೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಇದು ಮಹತ್ವದ್ದಾಗಿದೆ ಎಂದು ಡಾ. ಜಿತೇಂದ್ರ ಸಿಂಗ್ ಹೇಳಿದರು. ಸರ್ಕಾರಿ ಸಂಶೋಧನಾ ಸಂಸ್ಥೆಗಳು, ಖಾಸಗಿ ವಲಯದ ಸಂಶೋಧಕರು, ವೈದ್ಯರು, ನವೋದ್ಯಮಗಳು ಮತ್ತು ವೈದ್ಯಕೀಯ ಸಂಘಟನೆಗಳ ನಡುವೆ ಹೆಚ್ಚಿನ ಸಹಯೋಗಕ್ಕೆ ಅವರು ಕರೆ ನೀಡಿದರು. ವೈಜ್ಞಾನಿಕ ಸಂಶೋಧನೆಗಳ ಫಲಿತಾಂಶಗಳನ್ನು ಪ್ರಾಯೋಗಿಕ ಆರೋಗ್ಯ ಪರಿಹಾರಗಳಾಗಿ ಪರಿವರ್ತಿಸಲು ಅನ್ವಯಿಕ ಸಂಶೋಧನೆ ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಅತ್ಯಗತ್ಯ ಎಂದು ಅವರು ತಿಳಿಸಿದರು.

ಪ್ರಸ್ತುತ ನಡೆಯುತ್ತಿರುವ ಪ್ರಮುಖ ಸಂಶೋಧನಾ ಉಪಕ್ರಮಗಳಲ್ಲಿ ಭಾರತ-ಡೆನ್ಮಾರ್ಕ್ ಸಹಯೋಗದ ಅಧ್ಯಯನವೂ ಒಂದಾಗಿದೆ. ಮಧುಮೇಹ ಪೂರ್ವ ಹಂತದಲ್ಲಿರುವವರು ಮತ್ತು ಮಧುಮೇಹಿಗಳ ಕರುಳಿನ ಸೂಕ್ಷ್ಮಜೀವಿ ಸಮುದಾಯದಲ್ಲಿ ಕಂಡುಬರುವ ಭಾರತಕ್ಕೆ ನಿರ್ದಿಷ್ಟವಾದ ಬದಲಾವಣೆಗಳನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗುತ್ತಿದೆ. ಚಯಾಪಚಯ ಅಸ್ವಸ್ಥತೆಗಳಲ್ಲಿ ಕರುಳಿನ ಸೂಕ್ಷ್ಮಜೀವಿಗಳ ಮಾದರಿಗಳ ಪಾತ್ರವನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳುವುದು ಇದರ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಇನ್ನೊಂದು ಡಿಬಿಟಿ ಬೆಂಬಲಿತ ಅಧ್ಯಯನದಲ್ಲಿ, ಜಿಎಲ್‌ಪಿ-1 ಉತ್ಪಾದಿಸುವ ಸಾಮರ್ಥ್ಯ ಹೊಂದಿರುವ ತಳೀಯವಾಗಿ ಮಾರ್ಪಡಿಸಿದ ಇ. ಕೋಲಿ ನಿಸ್ಲೆ 1917 ಬ್ಯಾಕ್ಟೀರಿಯಾವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಜಠರ-ಕರುಳಿನ ಮೂಲಕ ಚಿಕಿತ್ಸಕ ಅಣುಗಳನ್ನು ದೇಹಕ್ಕೆ ತಲುಪಿಸುವ ಪ್ರೋಬಯಾಟಿಕ್ ಆಧಾರಿತ ವಿಧಾನವಾಗಿ ಇದನ್ನು ಅಭಿವೃದ್ಧಿಪಡಿಸುವ ಸಾಧ್ಯತೆಗಳಿವೆ. ಈ ಸಂಬಂಧ ಮಾನವರ ಮೇಲೆ ಅಧ್ಯಯನಗಳನ್ನು ಕೈಗೊಳ್ಳುವ ನಿರೀಕ್ಷೆಯಿದೆ. ಅಲ್ಲದೆ, ಬಿಆರ್‌ಐಸಿ-ಟಿಎಚ್‌ಎಸ್‌ಟಿಐನಲ್ಲಿ ನಡೆಯುತ್ತಿರುವ ಸಂಶೋಧನೆಯು ಜಿಎಲ್‌ಪಿ-1 ಅನಲಾಗ್‌ಗಳನ್ನು ಕರುಳಿಗೆ ಸಂಬಂಧಿಸಿದ ಬ್ಯಾಕ್ಟೀರಿಯಾಗಳಲ್ಲಿ ಉತ್ಪಾದಿಸುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ.

ಜಿಎಲ್‌ಪಿ-1 ಆಧಾರಿತ ಚಿಕಿತ್ಸಾ ವಿಧಾನಗಳನ್ನು ದೇಹಕ್ಕೆ ತಲುಪಿಸುವ ಹೊಸ ಮಾರ್ಗಗಳನ್ನು ಅನ್ವೇಷಿಸುವುದು ಇದರ ಉದ್ದೇಶವಾಗಿದೆ ಎಂದು ಸಚಿವರು ಹೇಳಿದರು.

ಹೃದಯ ಮತ್ತು ಚಯಾಪಚಯ ವ್ಯವಸ್ಥೆಗೆ ಸಂಬಂಧಿಸಿದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಗರ್ಭಧಾರಣೆಗೆ ಮುನ್ನಿನಿಂದ ಹಿಡಿದು ಬಾಲ್ಯದ ಆರಂಭಿಕ ಹಂತದವರೆಗೆ ಕೈಗೊಳ್ಳಬಹುದಾದ ಮಧ್ಯಸ್ಥಿಕೆಗಳ ಕುರಿತು ನಡೆಯುತ್ತಿರುವ ಸಂಶೋಧನೆಯನ್ನೂ ಸಚಿವರು ಪ್ರಸ್ತಾಪಿಸಿದರು. ಮಕ್ಕಳಲ್ಲಿ ರಕ್ತದಲ್ಲಿನ ಗ್ಲೂಕೋಸ್ ಮಟ್ಟ,



- **ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ, ಮುಖ್ಯವಾಗಿ ಜೈವಿಕ ತಂತ್ರಜ್ಞಾನ ಇಲಾಖೆ (ಡಿಬಿಟಿ) ಮೂಲಕ ಮಧುಮೇಹಕ್ಕೆ ಸಂಬಂಧಿಸಿದ ಹನ್ನೆರಡಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳು ಪ್ರಗತಿಯಲ್ಲಿವೆ; ಆಣ್ವಿಕ ಮತ್ತು ಆನುವಂಶಿಕ ಪರಿಹಾರಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ: ಡಾ. ಜಿತೇಂದ್ರ ಸಿಂಗ್**
- **ಇಂಡೋ-ಡ್ಯಾನಿಶ್ ಗಟ್ ಮೈಕ್ರೋಬಯೋಮ್ ಅಧ್ಯಯನ, ಜಿಎಲ್‌ಪಿ-1 ಉತ್ಪಾದಿಸುವ ತಳೀಯವಾಗಿ ಮಾರ್ಪಡಿಸಿದ ಬ್ಯಾಕ್ಟೀರಿಯಾಗಳು ಮತ್ತು ನವೀನ ಆಣ

ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ
ನವಂಬರ್, 21- 2026
ಶನಿವಾರ
ರಾಜಧಾನಿ
www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481

ಜಪಾನ್‌ಗೆ ಡಿಕೆಶಿ ನಿಯೋಗ

● ವಿಕ್ರಮ ವಾಹಿನಿ । ಒಂದನೇ ಪುಟದಿಂದ

ಅವರ ಮುಂದಿನ ಹೂಡಿಕೆ ಯೋಜನೆಗಳ ಕುರಿತು ಚರ್ಚಿಸುವುದರ ಜೊತೆಗೆ ಕರ್ನಾಟಕದಲ್ಲಿರುವ ವಿಪುಲ ಹೂಡಿಕೆ ಅವಕಾಶಗಳನ್ನು ಮನವರಿಕೆ ಮಾಡಿಕೊಡಲಿದೆ.

ನವೆಂಬರ್ 27 ರವರೆಗೆ ನಡೆಯಲಿರುವ ಈ ಕೈಗಾರಿಕಾ ಸಭೆಗಳಲ್ಲಿ, 2027ರ ಏಪ್ರಿಲ್ 20 ರಿಂದ 22 ರವರೆಗೆ ಬೆಂಗಳೂರು ಅರಮನೆಯಲ್ಲಿ ಇನ್ವೆಸ್ಟ್ ಕರ್ನಾಟಕ ವತಿಯಿಂದ ಆಯೋಜಿಸಲಾಗಿರುವ 'ಜಾಗತಿಕ ಹೂಡಿಕೆದಾರರ ಸಮಾವೇಶ 2027' ಕ್ಕೆ ಪ್ರತಿ ಕಂಪನಿಗೂ ಅಧಿಕೃತ ಆಹ್ವಾನ ನೀಡಲಾಗುವುದು.

ಕರ್ನಾಟಕ ಮತ್ತು ಜಪಾನ್ ಎರಡೂ ಬಲಿಷ್ಠವಾಗಿರುವ ಪ್ರಮುಖ ವಲಯಗಳ ಮೇಲೆ ಈ ಸಭೆಗಳು ಕೇಂದ್ರೀಕೃತವಾಗಿವೆ:

* ಆಟೋಮೋಟಿವ್ ಮತ್ತು ಇವಿ (ಇಗಿ) ಬಿಡಿಭಾಗಗಳು: ಟೊಯೋಟಾ ಮತ್ತು ಪ್ಯಾನಾಸೋನಿಕ್ ಆಟೋಮೋಟಿವ್ ಸಿಸ್ಟಮ್ಸ್
* ವಿಶೇಷ ರಾಸಾಯನಿಕಗಳು ಮತ್ತು ಸುಧಾರಿತ ಸಾಮಗ್ರಿಗಳು: ಮಿತ್ಸುಬಿಷಿ ಕೆಮಿಕಲ್ ಗ್ರೂಪ್
* ಔಷಧೀಯ ಕ್ಷೇತ್ರ: ಟಕೆಡಾ ಫಾರ್ಮಾಸ್ಯುಟಿಕಲ್ಸ್
* ಕೈಗಾರಿಕಾ ಆಟೊಮೇಷನ್: ಯೊಕೊಗಾವಾ ಎಲೆಕ್ಟ್ರಿಕ್
* ಉತ್ಪಾದನಾ ವಲಯದ ಹೂಡಿಕೆಗಳು: ಸುಮಿಟೊಮೊ ಕಾರ್ಪೊರೇಷನ್

ಪ್ರತಿ ಸಭೆಯಲ್ಲಿಯೂ ರಾಜ್ಯ ಸರ್ಕಾರದ ಹೊಸ ನೀತಿಗಳು ಮತ್ತು ಪ್ರೋತ್ಸಾಹಕ ಕ್ರಮಗಳನ್ನು ಪ್ರಸ್ತುತಪಡಿಸಲಾಗುವುದು. ಇದರಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ನೀತಿ, ಹಿಂದುಳಿದ ಮತ್ತು ಆದ್ಯತಾ ತಾಲ್ಲೂಕುಗಳಲ್ಲಿನ ಹೂಡಿಕೆಗಳಿಗೆ ಶೇ. 20 ರವರೆಗಿನ ಹೆಚ್ಚುವರಿ ಬಂಡವಾಳ ಸಬ್ಸಿಡಿ, ಕೆಐಎಡಿಬಿ ಡಿಜಿಟಲ್ ಇಂಡಸ್ಟ್ರಿಯಲ್ ಲ್ಯಾಂಡ್ ಬ್ಯಾಂಕ್ ಹಾಗೂ ಪ್ರತಿ ಹೂಡಿಕೆ ಪ್ರಸ್ತಾವನೆಗೂ ಏಕಗವಾಕ್ಷಿ ಸೌಲಭ್ಯದ ಮಾಹಿತಿ ಒಳಗೊಂಡಿದೆ. ಜೊತೆಗೆ, ಕರ್ನಾಟಕದಲ್ಲಿ ಹೂಡಿಕೆ ಮಾಡುವ ಜಪಾನ್ ಕಂಪನಿಗಳಿಗೆ ಸಾಂಸ್ಥಿಕ ಬೆಂಬಲವನ್ನು ಬಲಪಡಿಸುವ ಕುರಿತು ಜೆಟ್ರೋ ಕಾರ್ಯನಿರ್ವಾಹಕ ಉಪಾಧ್ಯಕ್ಷರೊಂದಿಗೂ ಮಹತ್ವದ ಸಭೆ ನಡೆಯಲಿದೆ.

ನಗರಾಭಿವೃದ್ಧಿ: ಜಪಾನ್ ಮಾದರಿಯಿಂದ ಕಲಿಕೆ

ಯೋಜಿತ, ಹೆಚ್ಚಿನ ಜನಸಾಂದ್ರತೆಯ ಮತ್ತು ಸುಸ್ಥಿರ ನಗರ ಬೆಳವಣಿಗೆಗೆ ಜಪಾನ್‌ನ ನಗರಗಳು ಜಗತ್ತಿಗೇ ಮಾದರಿಯಾಗಿವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳೊಂದಿಗೆ ನಿಯೋಗವು ಬೆಂಗಳೂರು ಹಾಗೂ ಕರ್ನಾಟಕದ ಇತರ ವೇಗವಾಗಿ ಬೆಳೆಯುತ್ತಿರುವ ನಗರಗಳಿಗೆ ಅಗತ್ಯವಿರುವ ಪ್ರಮುಖ ಕ್ಷೇತ್ರಗಳ ಕುರಿತು ಅಧ್ಯಯನ ನಡೆಸಲಿದೆ. ಇದರಲ್ಲಿ ತ್ಯಾಜ್ಯ ನಿರ್ವಹಣೆ ಮತ್ತು ತ್ಯಾಜ್ಯದಿಂದ ಇಂಧನ ಉತ್ಪಾದನೆ, ನಗರ ಯೋಜನೆ, ಸಮಗ್ರ ಸಾರಿಗೆ ಮತ್ತು ಸಂಚಾರ ನಿರ್ವಹಣೆ, ಹಾಗೂ ಆಧುನಿಕ ವಾಸ್ತುಶಿಲ್ಪ ಮತ್ತು ನಗರ ವಿನ್ಯಾಸ ಸೇರಿವೆ.

ಹೆಚ್ಚಿನ ಜನಸಾಂದ್ರತೆಯ ಮಹಾನಗರಗಳನ್ನು ಜಪಾನ್ ಹೇಗೆ ಯೋಜಿಸುತ್ತದೆ, ನಿರ್ಮಿಸುತ್ತದೆ ಮತ್ತು ನಿರ್ವಹಿಸುತ್ತದೆ ಎಂಬುದರ ನೇರ ಅನುಭವವನ್ನು ಒಸಾಕಾ ಮತ್ತು ಟೋಕಿಯೊ ಭೇಟಿಗಳು ನಿಯೋಗಕ್ಕೆ ನೀಡಲಿವೆ. ವಿಶ್ವದ ಅತಿದೊಡ್ಡ ಮಹಾನಗರಗಳಲ್ಲಿ ಒಂದಾದ ಟೋಕಿಯೊ, ಸಮಗ್ರ ಸಾರಿಗೆ ಮತ್ತು ನಿಲ್ದಾಣ-ಕೇಂದ್ರಿತ ಪುನರಾಭಿವೃದ್ಧಿಗೆ ಜಾಗತಿಕ ಮಾದರಿಯಾಗಿದ್ದರೆ, ಪಶ್ಚಿಮ ಜಪಾನ್‌ನ ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರವಾದ ಒಸಾಕಾ, ಬೃಹತ್ ಪ್ರಮಾಣದ ನಗರ ನವೀಕರಣ ಮತ್ತು ಮಹಾನಗರ ಯೋಜನೆಯಲ್ಲಿ ಉತ್ತಮ ಪಾಠಗಳನ್ನು ಒದಗಿಸಲಿದೆ.

ಈ ಭೇಟಿಯ ಭಾಗವಾಗಿ, ಜಪಾನ್‌ನ ಪ್ರಮುಖ ವಾಸ್ತುಶಿಲ್ಪ ಮತ್ತು ನಗರ ವಿನ್ಯಾಸ ಸಂಸ್ಥೆಯಾದ ನಿಕ್ಕೆನ್ ಸೆಕ್ಕೆಯ್ ಪ್ರತಿನಿಧಿಗಳೊಂದಿಗೆ ನಿಯೋಗವು 'ಟೋಕಿಯೊ ಮಿಡ್‌ಟೌನ್ ರೊಪ್ಪೊಂಗಿ'ಗೆ ಭೇಟಿ ನೀಡಲಿದೆ. ಈ ಬೃಹತ್ ಯೋಜನೆಯು ನಗರ ಪುನರಾಭಿವೃದ್ಧಿ, ಸಾರಿಗೆ-ಆಧಾರಿತ ಅಭಿವೃದ್ಧಿ, ಭೂ ಮರುಹೊಂದಾಣಿಕೆ, ಮಿಶ್ರ ಭೂ ಬಳಕೆ ಮತ್ತು ನಗರ ಹಸಿರು ಪ್ರದೇಶಗಳ ನಿರ್ವಹಣೆಗೆ ಉತ್ತಮ ನಿದರ್ಶನವಾಗಿದೆ. ಬೆಂಗಳೂರು ಮತ್ತು ಇತರ ಭಾರತೀಯ ನಗರಗಳು ಸಹ ಇದೇ ದಿಕ್ಕಿನಲ್ಲಿ ವಿಕಸನಗೊಳ್ಳುತ್ತಿರುವುದರಿಂದ ಈ ಅಧ್ಯಯನ ಮಹತ್ವದ್ದಾಗಿದೆ.

ಇದರೊಂದಿಗೆ, ತ್ಯಾಜ್ಯ ನಿರ್ವಹಣೆ, ತ್ಯಾಜ್ಯದಿಂದ ಇಂಧನ ಉತ್ಪಾದನೆ ಮತ್ತು ನಗರ ಮೂಲಸೌಕರ್ಯ ನಿರ್ಮಾಣದಲ್ಲಿ ಜೆಎಫ್‌ಇ ಎಂಜಿನಿಯರಿಂಗ್ ಕಾರ್ಪೊರೇಷನ್‌ನ ಸಾಮರ್ಥ್ಯ ಮತ್ತು ಪ್ರಮುಖ ಯೋಜನೆಗಳನ್ನು ಅರಿಯಲು, ಟೋಕಿಯೊದಲ್ಲಿರುವ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಹಿರಿಯ ಆಡಳಿತ ಮಂಡಳಿಯೊಂದಿಗೆ ನಿಯೋಗವು ಸಭೆ ನಡೆಸಲಿದೆ ಎಂದು ವರದಿಯಾಗಿದೆ.

ಮಾಲಿನ್ಯ ಪ್ರಮಾಣ ಪತ್ರದ ಅವಧಿ ವಿಸ್ತರಣೆ

● ವಿಕ್ರಮ ವಾಹಿನಿ । ಒಂದನೇ ಪುಟದಿಂದ

ಒಂದೇ ಮಾದರಿಯ ಎರಡು ಕಾರುಗಳಿದ್ದರೂ ಅವುಗಳ ಬಳಕೆ ಖಾಸಗಿಯೇ ಅಥವಾ ವಾಣಿಜ್ಯ ಉದ್ದೇಶಕ್ಕಾಗಿಯೇ ಎಂಬುದರ ಜತೆಗೆ ನೋಂದಣಿಯಾದ ದಿನಾಂಕದ ಆಧಾರದ ಮೇಲೆ ಪಿಯುಸಿ ಅವಧಿ ಬದಲಾಗುತ್ತದೆ. ಈಗಾಗಲೇ ಪಿಯುಸಿ ಪ್ರಮಾಣಪತ್ರ ಹೊಂದಿರುವ ವಾಹನ ಮಾಲೀಕರಿಗೆ ಹೊಸ ನಿಯಮದಡಿ ಹಳೆಯ ಪ್ರಮಾಣಪತ್ರದ ಅವಧಿ ಸ್ವಯಂಚಾಲಿತವಾಗಿ ವಿಸ್ತರಣೆಯಾಗುವುದಿಲ್ಲ. ಹಳೆಯ ಪ್ರಮಾಣಪತ್ರದಲ್ಲಿರುವ ಮುಕ್ತಾಯದ ದಿನಾಂಕವೇ ಅಂತಿಮವಾಗಿರುತ್ತದೆ. ಉದಾಹರಣೆಗೆ, ನಾಲ್ಕು ವರ್ಷ ಹಳೆಯದಾದ ಬಿಎಸ್-6 ಖಾಸಗಿ ಕಾರಿನ ಪಿಯುಸಿ ಪ್ರಮಾಣಪತ್ರ ಮುಂದಿನ ತಿಂಗಳು ಮುಕ್ತಾಯಗೊಳ್ಳುತ್ತಿದ್ದರೆ, ಮಾಲೀಕರು ಕಡ್ಡಾಯವಾಗಿ ಅದನ್ನು ನವೀಕರಿಸಬೇಕು. ನವೀಕರಣದ ನಂತರ ನೀಡಲಾಗುವ ಹೊಸ ಪ್ರಮಾಣಪತ್ರ ಮೂರು ವರ್ಷಗಳವರೆಗೆ ಮಾನ್ಯವಾಗಿರುತ್ತದೆ. ಹೀಗಾಗಿ ಹಳೆಯ ಪ್ರಮಾಣಪತ್ರದ ಅವಧಿ ತಾನಾಗಿಯೇ ವಿಸ್ತರಣೆಯಾಗಿದೆ ಎಂದು ಭಾವಿಸಿ ನಿರ್ಲಕ್ಷ್ಯ ವಹಿಸಬಾರದು.

ಪಿಯುಸಿ ಪ್ರಮಾಣಪತ್ರದ ಅವಧಿ ಮುಗಿಯುವ 10 ದಿನಗಳ ಒಳಗಾಗಿ ಹೊಸದಾಗಿ ನವೀಕರಿಸಿದರೆ, ಹಳೆಯ ಪ್ರಮಾಣಪತ್ರದ ಮುಕ್ತಾಯದ ದಿನಾಂಕದಿಂದಲೇ ಹೊಸ ಮೂರು ವರ್ಷದ ಅವಧಿ ಆರಂಭವಾಗುತ್ತದೆ. ಇದರಿಂದ ಹಳೆಯ ಪ್ರಮಾಣಪತ್ರದ ಉಳಿದ ಅವಧಿ ವ್ಯರ್ಥವಾಗುವುದಿಲ್ಲ. ಒಂದು ವೇಳೆ ಪ್ರಮಾಣಪತ್ರದ ಅವಧಿ ಮುಗಿದ ಬಳಿಕ ನವೀಕರಿಸಿದರೆ, ನವೀಕರಣ ಮಾಡಿದ ದಿನದಿಂದಲೇ ಹೊಸ ಅವಧಿ ಲೆಕ್ಕಕ್ಕೆ ಬರುತ್ತದೆ. ಪಿಯುಸಿ ಪ್ರಮಾಣಪತ್ರದ ಮಾನ್ಯತಾ ಅವಧಿ ಹೆಚ್ಚಾದರೂ ವಾಹನ ಚಲಾಯಿಸುವಾಗ ಅಧಿಕೃತ ಕೇಂದ್ರದಿಂದ ಪಡೆದ ಪ್ರಮಾಣಪತ್ರವನ್ನು ಹೊಂದಿರುವುದು ಹಾಗೂ ಪೊಲೀಸರು ಕೇಳಿದಾಗ ಅದನ್ನು ತೋರಿಸುವುದು ಕಡ್ಡಾಯವಾಗಿದೆ.

ಬಿಎಸ್-6 ಎಂದರೆ ಭಾರತ್ ಸ್ಟೇಜ್-6. ವಾಹನಗಳಿಂದ ಹೊರಬರುವ ಹೊಗೆ ಮತ್ತು ವಿಷಕಾರಿ ಅನಿಲಗಳ ಪ್ರಮಾಣವನ್ನು ನಿಯಂತ್ರಿಸುವ ಉದ್ದೇಶದಿಂದ ಭಾರತ ಸರ್ಕಾರ ಜಾರಿಗೆ ತಂದಿರುವ ಕಟ್ಟುನಿಟ್ಟಾದ ಮಾಲಿನ್ಯ ನಿಯಂತ್ರಣ ಮಾನದಂಡ ಇದಾಗಿದೆ. ಬಿಎಸ್-6 ವಾಹನಗಳಲ್ಲಿ ಕಡಿಮೆ ಪ್ರಮಾಣದ ಗಂಧಕ ಹೊಂದಿರುವ ಶುದ್ಧ ಪೆಟ್ರೋಲ್ ಮತ್ತು ಡೀಸೆಲ್ ಬಳಸಲಾಗುತ್ತದೆ. ಇದರಿಂದ ವಾತಾವರಣಕ್ಕೆ ಸೇರುವ ಮಾಲಿನ್ಯಕಾರಕ ಹೊಗೆಯ ಪ್ರಮಾಣ ಕಡಿಮೆಯಾಗುತ್ತದೆ.

ಎಂ.ಇ.ಐ ಸಂಸ್ಥೆಯಲ್ಲಿ 11 ಕೆ.ವಿ. ಸರ್ವಿಸ್ ಸೆಂಟರ್ ಉದ್ಘಾಟನೆ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ

● ವಿಕ್ರಮ ವಾಹಿನಿ । (ಯಶವಂತಪುರ) ಬೆಂಗಳೂರು

ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ **(MEI)** ಸಂಸ್ಥೆಯ ಆವರಣದಲ್ಲಿ ನೂತನವಾಗಿ ಸ್ಥಾಪಿಸಿರುವ 11 ಕೆ.ವಿ. ಸರ್ವಿಸ್ ಸೆಂಟರ್ ಉದ್ಘಾಟನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಸಲೀಂ ಅಹಮದ್ ರವರು ಚಾಲನೆ ನೀಡಿ, ಗುದ್ದಲಿಪೂಜೆ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಎಸ್. ಮನೋಹರ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಅನಿತಾ ಸಿ. ಹಾಗೂ ಕೆಪಿಸಿಸಿ ವಕ್ತಾರರಾದ ಎಂ. ಲಕ್ಷ್ಮಣ್ ಅವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಭಾಪತಿಗಳಾದ ಸಲೀಂ ಅಹಮದ್ ಅವರು, 81 ವರ್ಷಗಳ ಸುದೀರ್ಘ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಒಇಖ ಸಂಸ್ಥೆಯು ಪ್ರಸ್ತುತ ಅಧ್ಯಕ್ಷರಾದ ಎಸ್. ಮನೋಹರ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಅನಿತಾ ಸಿ. ಹಾಗೂ ಅಧಿಕಾರಿಗಳು ಮತ್ತು ಕಾರ್ಮಿಕರ ಸಂಘಟಿತ ಪ್ರಯತ್ನದಿಂದ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ಸರ್ಕಾರಕ್ಕೆ ಸುಮಾರು ರೂ. 30 ಕೋಟಿ ಲಾಭ ತಂದು ಕೊಟ್ಟಿರುವುದು ಗಮನಾರ್ಹ ಸಾಧನೆಯಾಗಿದೆ. ಈ ಹಿಂದೆ ಬೇರೆ ರಾಜ್ಯಗಳಿಂದ ಖರೀದಿಸಬೇಕಾಗಿದ್ದ ಕೆಲವು ಉತ್ಪನ್ನಗಳು ಹಾಗೂ ಸಾಮಗ್ರಿಗಳನ್ನು ಸಂಸ್ಥೆಯಲ್ಲಿಯೇ ಉತ್ಪಾದಿಸುವ ಮೂಲಕ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವುದರ ಜೊತೆಗೆ ಸಂಸ್ಥೆಯ ಆರ್ಥಿಕ ಸ್ಥಿತಿಯ ಸುಧಾರಣೆಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಸಂಸ್ಥೆಯು ಕೈಗಾರಿಕಾ ಅಭಿವೃದ್ಧಿಯ ಜೊತೆಗೆ ಪರಿಸರ ಸಂರಕ್ಷಣೆಗೂ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ. ಇದೇ ರೀತಿಯಲ್ಲಿ ಸಂಸ್ಥೆಯು ನಿರಂತರವಾಗಿ ಪ್ರಗತಿ ಸಾಧಿಸಿ, ರಾಜ್ಯ ಹಾಗೂ ರಾಷ್ಟ್ರದ ವಿದ್ಯುತ್ ಕ್ಷೇತ್ರಕ್ಕೆ ಇನ್ನಷ್ಟು ಕೊಡುಗೆ ನೀಡಲಿ ಎಂದು ಅಧಿಕಾರಿಗಳಿಗೆ ಶುಭ ಹಾರೈಸಿದರು.



ಸಂಸ್ಥೆಯ ಅಧ್ಯಕ್ಷ ಎಸ್. ಮನೋಹರ್ ಅವರು ಮಾತನಾಡಿ, ಎಂ.ಇ.ಐ ಸಂಸ್ಥೆಯ 81 ವರ್ಷಗಳ ಇತಿಹಾಸದಲ್ಲಿ ಪ್ರಥಮ ಬಾರಿಗೆ 11 ಕೆ.ವಿ. ಸರ್ವಿಸ್ ಸೆಂಟರ್ ಉದ್ಘಾಟನೆಯಾಗುತ್ತಿರುವುದು ಮಹತ್ವದ ಮೈಲಿಗಲ್ಲಾಗಿದೆ ಎಂದು ತಿಳಿಸಿದರು.

ನಾಲ್ಕು ವರ್ಷಗಳ ಹಿಂದೆ ಸುಮಾರು ರೂ. 4 ಕೋಟಿ ನಷ್ಟದಲ್ಲಿದ್ದ ಸಂಸ್ಥೆಯು ಪ್ರಸ್ತುತ ಲಾಭದಾಯಕ ಹಾದಿಯಲ್ಲಿ ಮುನ್ನಡೆಯುತ್ತಿದೆ. 2025ನೇ ಸಾಲಿನಲ್ಲಿ ಸುಮಾರು ರೂ. 21 ಕೋಟಿ ಹಾಗೂ 2026ನೇ ಸಾಲಿನಲ್ಲಿ ಸುಮಾರು ರೂ. 31 ಕೋಟಿ ಲಾಭ ಗಳಿಸುವ ಮೂಲಕ ಸಂಸ್ಥೆಯು ಆರ್ಥಿಕವಾಗಿ ಸುಧಾರಣೆ ಕಂಡಿದೆ ಎಂದು ತಿಳಿಸಿದರು.

ಈ ಪ್ರಗತಿಗೆ ಸರ್ಕಾರದ ಸಹಕಾರ, ಆಡಳಿತ ಮಂಡಳಿಯ ಮಾರ್ಗದರ್ಶನ ಹಾಗೂ ಅಧಿಕಾರಿಗಳು ಮತ್ತು ಕಾರ್ಮಿಕರ ಪರಿಶ್ರಮವೇ ಪ್ರಮುಖ ಕಾರಣವೆಂದು ಹೇಳಿದರು.

ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಅನಿತಾ ಸಿ. ಅವರು ಮಾತನಾಡಿ, ಸಂಸ್ಥೆಯ ಮಾರುಕಟ್ಟೆ ವಿಭಾಗದ ಕಾರ್ಯಚಟುವಟಿಕೆಗಳಿಗೆ ಮತ್ತಷ್ಟು ಬಲ ನೀಡುವ ಉದ್ದೇಶದಿಂದ ನೂತನ ಸರ್ವಿಸ್ ಸೆಂಟರ್ ಸ್ಥಾಪಿಸಲಾಗಿದೆ. ಸಂಸ್ಥೆಯಲ್ಲಿ ಉತ್ತಮ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದು, ಸರ್ಕಾರದಿಂದ ದೊರೆಯುತ್ತಿರುವ ಪ್ರೋತ್ಸಾಹ ಮತ್ತು ಸಹಕಾರದಿಂದ ಅಧಿಕಾರಿಗಳು ಹಾಗೂ ನೌಕರರಲ್ಲಿ ಹೊಸ ಹುಮ್ಮಸ್ಸು ಮತ್ತು ಕಾರ್ಯನಿರ್ವಹಣೆಯ ಉತ್ಸಾಹ ಹೆಚ್ಚಾಗಿದೆ ಎಂದು ತಿಳಿಸಿದರು. ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಕಾರ್ಮಿಕರು ಉಪಸ್ಥಿತರಿದ್ದರು.

ಸ್ಟಿಂಗ್: ಆರು ಮಂದಿ ನಿರೀಕ್ಷಣಾ ಜಾಮೀನು ಅರ್ಜಿ ವಜಾ

● ವಿಕ್ರಮ ವಾಹಿನಿ । ಬೆಂಗಳೂರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಸೇರಿದಂತೆ ಆರು ಮಂದಿ ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಈ ಆದೇಶದಿಂದ ಕೃಪಾ ಆಳ್ವಾ ಸೇರಿದಂತೆ ಆರೋಪಿಗಳಿಗೆ ಬಂಧನದ ಭೀತಿ ಎದುರಾಗಿದೆ.

ಕೃಪಾ ಆಳ್ವಾ, ಜೆಡಿಎಸ್‌ನ ಸಾಮಾಜಿಕ ಜಾಲತಾಣ ಕಾರ್ಯಕರ್ತರಾದ ಪ್ರಜ್ವಲ್ ಪ್ರಸಾದ್, ಚಂದನ್ ಎಚ್.ಎಸ್., ಕೆ.ವಿ. ಪ್ರಶಾಂತ್ ಕುಮಾರ್, ವಿನೋದ್ ಕುಮಾರ್ ಸೇರಿದಂತೆ ಆರು ಮಂದಿ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಅರ್ಜಿಗಳ ವಿಚಾರಣೆ ನಡೆಸಿದ 66ನೇ ಸಿಸಿಹೆಚ್ ನ್ಯಾಯಾಲಯವು ವಾದ-ಪ್ರತಿವಾದಗಳನ್ನು ಆಲಿಸಿ ಆದೇಶವನ್ನು ಕಾಯ್ದಿರಿಸಿತ್ತು. ಇದೀಗ ಅರ್ಜಿಗಳನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ. ಸೆಪ್ಟೆಂಬರ್ 27ರಂದು 'ಕರ್ನಾಟಕ ಹನಿಟ್ರ್ಯಾಪ್' ಎಂಬ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಸ್ಟಿಂಗ್ ಆಪರೇಷನ್‌ಗೆ ಸಂಬಂಧಿಸಿದ ವಿಷಯ ಪ್ರಕಟವಾಗಿತ್ತು. ಇದಾದ ಬಳಿಕ ಅಕ್ಟೋಬರ್ 6ರಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ದೂರು ನೀಡಿದ್ದರು.

ಪಿಡಿಒಗಳಿಗೆ ಹೆಚ್ಚುವರಿ ಜವಾಬ್ದಾರಿ ಬೇಡ: ಸಚಿವ ಖಂಡ್ರೆ ಸೂಚನೆ

● ವಿಕ್ರಮ ವಾಹಿನಿ । ಒಂದನೇ ಪುಟದಿಂದ



ರಾಜ್ಯದಲ್ಲಿ ಈ ಬಾರಿ ಮಳೆಯ ಕೊರತೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಹಿನ್ನೆಲೆಯಲ್ಲಿ ಪರ್ಯಾಯ ಜಲಮೂಲಗಳನ್ನು ಗುರುತಿಸಬೇಕು. ಅಗತ್ಯವಿರುವ ಕಡೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಬೇಕು. ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸುವ ವ್ಯವಸ್ಥೆ ಮಾಡಬೇಕು. ಈ ಕುರಿತು ಎಲ್ಲ ಪಿಡಿಓಗಳಿಗೆ ನಿರ್ದೇಶನ ನೀಡಿ, ಜಿಲ್ಲಾ ಪಂಚಾಯಿತಿ ಸಿಇಒಗಳು ನಿರಂತರ ಮೇಲ್ವಿಚಾರಣೆ ನಡೆಸಬೇಕು ಎಂದು ತಿಳಿಸಿದರು.

ಅಂಗನವಾಡಿ ಹಾಗೂ ಗ್ರಾಮೀಣ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಲ್ಲಿ ಆಟಿಸಂ ಲಕ್ಷಣಗಳಿವೆಯೇ ಎಂಬುದನ್ನು ಆರಂಭಿಕ ಹಂತದಲ್ಲೇ ಗುರುತಿಸಲು ಗ್ರಾಮಮಟ್ಟದಲ್ಲಿ ತಪಾಸಣಾ ಶಿಬಿರಗಳನ್ನು ಆಯೋಜಿಸಬೇಕು ಎಂದು ಸಚಿವರು ಸೂಚಿಸಿದರು. ಸಾಮಾಜಿಕ ಸಂವಹನ, ಭಾಷೆ, ನಡವಳಿಕೆ ಹಾಗೂ ಜಗತ್ತನ್ನು ಗ್ರಹಿಸುವ ರೀತಿಯ ಮೇಲೆ ಪರಿಣಾಮ ಬೀರುವ ಬೆಳವಣಿಗೆಯ ಸ್ಥಿತಿಯಾದ ಆಟಿಸಂ ಅನ್ನು ಆರಂಭದಲ್ಲೇ ಗುರುತಿಸುವುದರಿಂದ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ನೆರವು ಒದಗಿಸಲು ಸಾಧ್ಯವಾಗಲಿದೆ ಎಂದರು.

ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿರುವ ಯಶಸ್ವಿ ಕಾರ್ಯಕ್ರಮಗಳು ಮತ್ತು ಉತ್ತಮ ಕಾರ್ಯವಿಧಾನಗಳ ಕುರಿತು ಸಭೆಯಲ್ಲಿ ಮಾಹಿತಿ ಹಂಚಿಕೊಳ್ಳುವಂತೆ ಈಶ್ವರ ಖಂಡ್ರೆ ಸೂಚಿಸಿದರು. ಒಂದು ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವ ಜನಪರ ಕಾರ್ಯಕ್ರಮಗಳು ಹಾಗೂ ಉತ್ತಮ ಆಡಳಿತಾತ್ಮಕ ಕ್ರಮಗಳನ್ನು ಇತರ ಜಿಲ್ಲೆಗಳಲ್ಲಿಯೂ ಅಳವಡಿಸಿಕೊಳ್ಳಬೇಕು. ಇದರಿಂದ ಗ್ರಾಮೀಣಾಭಿವೃದ್ಧಿ ಕಾರ್ಯಗಳಿಗೆ ವೇಗ ದೊರೆಯುವುದರ ಜತೆಗೆ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಗ್ರ

www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481

ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ
ವಿಕ್ರಮ ವಾಹಿನಿ

'ಕೆಂಪೇಗೌಡರು ವಿಶ್ವಮಾನವ ತತ್ವದ ಪ್ರತೀಕ'

● ವಿಕ್ರಮ ವಾಹಿನಿ । ಬೆಂಗಳೂರು

ನಾಡಪ್ರಭು ಕೆಂಪೇಗೌಡರು ಒಕ್ಕಲಿಗ ಸಮುದಾಯದಲ್ಲಿ ಜನಿಸಿದ್ದರೂ ಯಾವುದೇ ಒಂದು ಜಾತಿಗೆ ಸೀಮಿತವಾದವರಲ್ಲ. ಎಲ್ಲ ಜಾತಿ, ಧರ್ಮ ಹಾಗೂ ವರ್ಗದ ಜನರ ಬದುಕು ಕಟ್ಟಿದ ವಿಶ್ವಮಾನವ ತತ್ವದ ಪ್ರತಿಪಾದಕರಾಗಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಲಗ್ಗೆರೆ ವೃತ್ತದಲ್ಲಿ ಕೆಂಪೇಗೌಡರು ಹಾಗೂ ಕಾವೇರಿ ಮಾತೆಯ ಪ್ರತಿಮೆಗಳನ್ನು ಅನಾವರಣಗೊಳಿಸಿ, ಕೆಂಪೇಗೌಡ ಸಭಾಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಶುಕ್ರವಾರ ಮಾತನಾಡಿದ ಅವರು, ಕೆಂಪೇಗೌಡರ ದೂರದೃಷ್ಟಿ, ಸಮಾನತೆಯ ಚಿಂತನೆ ಮತ್ತು ಸಮಾಜಮುಖಿ ಆಡಳಿತ ನಮಗೆಲ್ಲ ಮಾರ್ಗದರ್ಶನವಾಗಬೇಕು. ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಇಡೀ ನಾಡಿನ ಹೆಮ್ಮೆಯ ನಾಯಕರಾಗಿ ಗೌರವಿಸಬೇಕು ಎಂದರು.

ಕೆಂಪೇಗೌಡರು ಕೆರೆಗಳನ್ನು ನಿರ್ಮಿಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದರು. ಪೇಟೆಗಳನ್ನು ನಿರ್ಮಿಸುವ ಮೂಲಕ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಎಲ್ಲ ವರ್ಗದ ಜನರು ನೆಮ್ಮದಿಯಿಂದ ಬದುಕು ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಟ್ಟ ದೂರದೃಷ್ಟಿಯ ಆಡಳಿತಗಾರರಾಗಿದ್ದರು. ಅವರು ಹಾಕಿಕೊಟ್ಟ ಅಭಿವೃದ್ಧಿಯ ಅಡಿಪಾಯದ ಮೇಲೆ ಇಂದು ಬೆಂಗಳೂರು ವಿಶ್ವದ ಗಮನ ಸೆಳೆಯುವ ಮಹಾನಗರವಾಗಿ ಬೆಳೆದಿದೆ ಎಂದು ಹೇಳಿದರು.

ಕುವೆಂಪು ಅವರ ವಿಶ್ವಮಾನವ ಸಂದೇಶದಂತೆ ಜಾತಿ, ಧರ್ಮದ ಭೇದ ಮರೆತು ಎಲ್ಲರೂ ಒಟ್ಟಾಗಿ ಬದುಕಬೇಕು. ಬಾಲಗಂಗಾಧರನಾಥ ಸ್ವಾಮೀಜಿಗಳು ಎಲ್ಲ ವರ್ಗದ ಜನರಿಗೆ ಮಾರ್ಗದರ್ಶನ ನೀಡಿದ್ದರು. ಇಂದು ಮಠಗಳು ಗ್ರಾಮೀಣ ಮಕ್ಕಳಿಗೆ ಶಿಕ್ಷಣ ನೀಡಿ ಅವರ ಬದುಕು ರೂಪಿಸುತ್ತಿವೆ. ಹೀಗಾಗಿ ಮಠಗಳನ್ನು ಉಳಿಸಿ ಬೆಳೆಸುವುದು ಎಲ್ಲರ ಜವಾಬ್ದಾರಿ ಎಂದು ತಿಳಿಸಿದರು.

ಕೆಂಪೇಗೌಡರ ಇತಿಹಾಸ ಉಳಿಸಲು ಬೃಹತ್ ಯೋಜನೆ

ನಾಡಪ್ರಭು ಕೆಂಪೇಗೌಡರ ಇತಿಹಾಸ, ಸ್ಮಾರಕ ಮತ್ತು ಸಾಧನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಸರ್ಕಾರ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಬಾಬು ಜಗಜೀವನ ರಾಮ್ ಭವನದ ಪಕ್ಕದಲ್ಲಿ ಐದು ಎಕರೆ ಜಮೀನು ಮಂಜೂರು ಮಾಡಿ, ಕೆಂಪೇಗೌಡರ ಹೆಸರಿನಲ್ಲಿ ಪ್ರಾಧಿಕಾರ ರಚಿಸಲಾಗಿದೆ. ಈ ಯೋಜನೆಗೆ ಸುಮಾರು ರೂ.103 ಕೋಟಿ ವೆಚ್ಚವಾಗಲಿದ್ದು, ಈಗಾಗಲೇ ಭೂಮಿಪೂಜೆ ನೆರವೇರಿಸಲಾಗಿದೆ. ಮಾಗಡಿ ಕೋಟೆ ಅಭಿವೃದ್ಧಿಗೆ ರೂ.67 ಕೋಟಿ ಒದಗಿಸಲಾಗಿದೆ. ವೀರಾಪುರದಲ್ಲಿ ಕೆಂಪೇಗೌಡರ ಸಮಾಧಿ ಅಭಿವೃದ್ಧಿಗೂ ಅನುದಾನ ನೀಡಲಾಗಿದೆ. ರೂ.100 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಹೆಸರಿನಲ್ಲಿ ನಗರ ಯೋಜನಾ ಕಾಲೇಜು ಸ್ಥಾಪಿಸಲಾಗಿದೆ ಎಂದು ವಿವರಿಸಿದರು.

ಕೆಂಪೇಗೌಡರ ಕೊಡುಗೆ ಕೇವಲ ಇತಿಹಾಸದ ಪುಟಗಳಿಗೆ ಸೀಮಿತವಾಗಬಾರದು. ಅವರ



ದೂರದೃಷ್ಟಿಯ ಚಿಂತನೆ ಇಂದಿನ ಅಭಿವೃದ್ಧಿಗೂ ದಾರಿದೀಪವಾಗಬೇಕು ಎಂದರು.

ಹಳ್ಳಿಗಳಿಂದ ನಗರಗಳಿಗೆ ಜನರ ವಲಸೆ ತಡೆಯಲು ಗ್ರಾಮೀಣ ಪ್ರದೇಶಗಳಲ್ಲಿಯೇ ಗುಣಮಟ್ಟದ ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯ ಕಲ್ಪಿಸುವ ಚಿಂತನೆ ನಡೆಸಲಾಗಿದೆ. ಈ ನಿಟ್ಟಿನಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ ರೂಪಿಸಿದ್ದು, ಅದರ ಅನುದಾನ ಬಳಸಿ 1,000 ಶಾಲೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗಿದೆ. ಬೆಂಗಳೂರು ದಕ್ಷಿಣ ಭಾಗದಲ್ಲಿ 30 ಶಾಲೆಗಳನ್ನು ಸಿಬಿಎಸ್‌ಇ ಮತ್ತು ಐಸಿಎಸ್‌ಇ ಮಾದರಿಯಲ್ಲಿ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಇಂತಹ ಶಾಲೆಗಳಲ್ಲಿ ಹಿಂದೆ ಸುಮಾರು 400 ಮಕ್ಕಳಿದ್ದರೆ, ಹೊಸ ಕಟ್ಟಡ ಮತ್ತು ಗುಣಮಟ್ಟದ ಸೌಲಭ್ಯ ಕಲ್ಪಿಸಿದ ಬಳಿಕ ವಿದ್ಯಾರ್ಥಿಗಳ ಸಂಖ್ಯೆ 2,000ಕ್ಕೆ ಏರಿಕೆಯಾಗಿದೆ. ಇದೇ ರೀತಿಯ ಬದಲಾವಣೆ ಗ್ರಾಮೀಣ ಪ್ರದೇಶಗಳಲ್ಲೂ ಆಗಬೇಕು. ಶಿಕ್ಷಣಕ್ಕಾಗಿ ಮಕ್ಕಳು ಮತ್ತು ಪೋಷಕರು ಬೆಂಗಳೂರಿಗೆ ವಲಸೆ ಬರುವ ಪರಿಸ್ಥಿತಿ ತಪ್ಪಬೇಕು. ಈ ಕಾರ್ಯದಲ್ಲಿ ಮಠಗಳ ಕೊಡುಗೆ ಮಹತ್ವದ್ದಾಗಿದೆ ಎಂದರು.

ಮಠಗಳು ಇಲ್ಲದಿದ್ದರೆ ನಗರಗಳ ಮೇಲಿನ ಒತ್ತಡ ಮತ್ತಷ್ಟು ಹೆಚ್ಚಾಗುತ್ತಿತ್ತು. ಗ್ರಾಮೀಣ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಮಠಗಳನ್ನು ಎಲ್ಲರೂ ಕಾಪಾಡಿಕೊಳ್ಳಬೇಕು. ಮನೆಗೆ ತೋರುವ ಕಾಳಜಿಯನ್ನು ಮಠಗಳಿಗೂ ತೋರಬೇಕು ಎಂದು ಮನವಿ ಮಾಡಿದರು.

ಡಬಲ್ ಡೆಕ್ಕರ್ ಯೋಜನೆಗೆ ಚಾಲನೆ

ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮೆಟ್ರೋ ವಿಸ್ತರಣೆ ಹಾಗೂ ಡಬಲ್ ಡೆಕ್ಕರ್ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಮಾಗಡಿ ರಸ್ತೆಯಿಂದ ತಾವರೆಕೆರೆವರೆಗೆ ಮೆಟ್ರೋ ಸಂಪರ್ಕ ಕಲ್ಪಿಸಲು ಸಿದ್ಧತೆ ನಡೆಸಲಾಗಿದೆ. ಈ ಮಾರ್ಗದಲ್ಲಿ ಡಬಲ್ ಡೆಕ್ಕರ್ ವ್ಯವಸ್ಥೆ ಜಾರಿಗೆ ತರಲು ಪ್ರಧಾನ ಮಂತ್ರಿಗಳೊಂದಿಗೂ ಚರ್ಚಿಸಲಾಗಿದೆ. ಆರಂಭದಲ್ಲಿ ನಿರಾಕರಿಸಲಾಗಿದ್ದರೂ ಈಗ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ ಎಂದು ಹೇಳಿದರು.

ಬೆಂಗಳೂರಿನ ಸಂಚಾರ ವ್ಯವಸ್ಥೆ ಸುಧಾರಿಸಲು ಜಪಾನ್ ಪ್ರವಾಸ ಕೈಗೊಂಡಿದ್ದು, ಅಲ್ಲಿನ ನಗರ ಯೋಜನೆಗಳನ್ನು ಅಧ್ಯಯನ ಮಾಡಿ ಉತ್ತಮ ಮಾದರಿಗಳನ್ನು ಬೆಂಗಳೂರಿನಲ್ಲಿ ಅಳವಡಿಸಿಕೊಳ್ಳುವ ಉದ್ದೇಶವಿದೆ. ನಗರಾಭಿವೃದ್ಧಿ ಎಂದರೆ ಕೇವಲ ಕಟ್ಟಡ ಮತ್ತು ರಸ್ತೆ ನಿರ್ಮಾಣವಲ್ಲ; ಜನರ ಸಂಚಾರ, ಪರಿಸರ ಮತ್ತು ಜೀವನಮಟ್ಟ ಸುಧಾರಿಸುವುದೂ ಆಗಿದೆ ಎಂದರು.

ಕಾವೇರಿ ಆರನೇ ಹಂತದ ಯೋಜನೆ ಜಾರಿ

ಬೆಂಗಳೂರಿನ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕಾವೇರಿ ಆರನೇ ಹಂತದ ಯೋಜನೆಗೆ ಅನುಮೋದನೆ ದೊರಕಿಸಿಕೊಡಲಾಗಿದೆ. ನಗರಕ್ಕೆ ನೀರಿನ ಭದ್ರತೆ ಕಲ್ಪಿಸುವ ಜತೆಗೆ ಗ್ರಾಮೀಣ ಪ್ರದೇಶಗಳ ಕೆರೆಗಳು, ಕೃಷಿ ಮತ್ತು ನೀರಾವರಿ ಯೋಜನೆಗಳಿಗೂ ಸರ್ಕಾರ ಆದ್ಯತೆ ನೀಡುತ್ತಿದೆ. ಮೇಕೆದಾಟು ಯೋಜನೆ ಸೇರಿದಂತೆ ಹಲವು ಯೋಜನೆಗಳ ಮೂಲಕ ರೈತರ ಬದುಕಿಗೆ ಶಾಶ್ವತ ಭದ್ರತೆ ಕಲ್ಪಿಸುವ ಉದ್ದೇಶವಿದೆ ಎಂದು ತಿಳಿಸಿದರು.

ರಾಜರಾಜೇಶ್ವರಿ ನಗರ ಕ್ಷೇತ್ರಕ್ಕೆ ರೂ.441 ಕೋಟಿ ಅಭಿವೃದ್ಧಿ ಕಾಮಗಾರಿ

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು ರೂ.441 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಮಳೆನೀರು ಚರಂಡಿ ಕಾಮಗಾರಿಗಳಿಗೆ ರೂ.190 ಕೋಟಿ, ರಸ್ತೆ ಅಭಿವೃದ್ಧಿಗೆ ರೂ.40 ಕೋಟಿ ಸೇರಿದಂತೆ ಹಲವು ಯೋಜನೆಗಳ ಕಾಮಗಾರಿಗಳು ಆರಂಭಗೊಂಡಿವೆ. ಬೆಂಗಳೂರಿನ ಅಭಿವೃದ್ಧಿಯಿಂದ ಸಂಗ್ರಹವಾಗುವ ತೆರಿಗೆ ಸಂಪನ್ಮೂಲವನ್ನು ಗ್ರಾಮೀಣ ಜನರ ಅಭಿವೃದ್ಧಿಗೂ ಬಳಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಹೇಳಿದರು.

ಬಿ ಖಾತಾ ನಿವೇಶನಗಳಿಗೆ ಎ ಖಾತಾ ಸೌಲಭ್ಯ

ಜನರ ಆಸ್ತಿಗಳಿಗೆ ಕಾನೂನುಬದ್ಧ ಮಾನ್ಯತೆ ಮತ್ತು ಸೂಕ್ತ ಮೌಲ್ಯ ದೊರೆಯಬೇಕು ಎಂಬ ಉದ್ದೇಶದಿಂದ ಭೂಮಿ ಗ್ಯಾರಂಟಿ ಯೋಜನೆಯಡಿ ಬಿ ಖಾತಾ ನಿವೇಶನಗಳನ್ನು ಎ ಖಾತಾ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಕೇವಲ ಶೇ.5ರಷ್ಟು ಮೊತ್ತ ಪಾವತಿಸುವ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ವಿವಿಧ ಸಮುದಾಯಗಳ ಸಂಘಗಳಿಗೆ ಬಡ್ಡಿ ಮನ್ನಾ

ಒಕ್ಕಲಿಗರ ಸಂಘ ಬಿಡಿಎಗೆ ರೂ.93 ಕೋಟಿ ಪಾವತಿಸಬೇಕಿತ್ತು. ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ. ಅಲ್ಲದೆ, ವಿವಿಧ ಸಮುದಾಯಗಳ ಸಂಘ-ಸಂಸ್ಥೆಗಳು ಬಿಡಿಎಗೆ ಪಾವತಿಸಬೇಕಿರುವ ಒಟ್ಟು ಸುಮಾರು ರೂ.400 ಕೋಟಿ ಬಾಕಿ ಮೊತ್ತದ ಮೇಲಿನ ಬಡ್ಡಿ ಮನ್ನಾ ಮಾಡುವ ಕುರಿತು ಸರ್ಕಾರ ತೀರ್ಮಾನಿಸಿದೆ. ಇದು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದ ನಿರ್ಧಾರವಲ್ಲ. ಕುರುಬರು ಸೇರಿದಂತೆ ವಿವಿಧ ಸಮುದಾಯಗಳ ಸಂಘ-ಸಂಸ್ಥೆಗಳು ಹಾಗೂ ಎಲ್ಲ ಸಮಾಜಗಳ ಅಭಿವೃದ್ಧಿಗೆ ಸರ್ಕಾರ ಸಮಾನ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

136 ಸ್ಥಾನಗಳ ವಿಶ್ವಾಸ ಉಳಿಸಿಕೊಳ್ಳುವ ಹೊಣೆ ನಮ್ಮದು

ಮುಂದಿನ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲುವುದು ಖಚಿತ ಎಂದು ಹೇಳಿದ ಅವರು, ಜಾತಿ-ಧರ್ಮ ನೋಡದೆ ಜನರ ಸೇವೆ ಮಾಡುವುದು ಮುಖ್ಯ. ಜನರ ಕ್ರಿಯಾಶೀಲತೆ, ಗೌರವ ಮತ್ತು ಸ್ವಾಭಿಮಾನವನ್ನು ಉಳಿಸುವುದು ನಮ್ಮ ಆದ್ಯತೆಯಾಗಿದೆ ಎಂದರು.

ನನಗೂ ಲಗ್ಗೆರೆ ಕ್ಷೇತ್ರಕ್ಕೂ ಬಹಳ ಹಿಂದಿನಿಂದಲೂ ನಂಟಿದೆ. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಈ ಭಾಗದೊಂದಿಗೆ ಸಂಪರ್ಕವಿದೆ. ಕ್ಷೇತ್ರದ ಜನರ ಪ್ರೀತಿ ಮತ್ತು ವಿಶ್ವಾಸದ ಮೇಲೆ ಅಪಾರ ನಂಬಿಕೆಯಿದೆ. ಜನರು ಕಾಂಗ್ರೆಸ್ ಸರ್ಕಾರಕ್ಕೆ 136 ಸ್ಥಾನಗಳನ್ನು ನೀಡಿ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಾರೆ.

ಈ ವಿಶ್ವಾಸ ಉಳಿಸಿಕೊಂಡು ಜನರ ಗೌರವ, ಸ್ವಾಭಿಮಾನ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡುವುದು ನಮ್ಮ ಕರ್ತವ್ಯ. ಮುಂದಿನ ದಿನಗಳಲ್ಲೂ ಈ ಕ್ಷೇತ್ರದ ಜನರ ಬೆಂಬಲ ದೊರೆಯಲಿದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಜೀವನದಲ್ಲಿ ಯಾವುದೂ ಶಾಶ್ವತವಲ್ಲ. ಆದರೆ ಸಮಾಜಕ್ಕೆ ಸಲ್ಲಿಸಿದ ಸೇವೆ ಮತ್ತು ಮಾಡಿದ ದಾನ ಶಾಶ್ವತವಾಗಿ ಉಳಿಯುತ್ತವೆ. ಕೆಂಪೇಗೌಡರ ಪ್ರತಿಮೆ ಹಾಗೂ ಸಭಾಭವನ ನಿರ್ಮಾಣಕ್ಕೆ ದೇಣಿಗೆ ನೀಡಿದ ವೇದಮೂರ್ತಿ ಮತ್ತು ಅವರ ಕುಟುಂಬದವರನ್ನು ಅಭಿನಂದಿಸುತ್ತೇನೆ.

ಕೆಂಪೇಗೌಡರ ಆಶಯಗಳನ್ನು ಉಳಿಸಿ ಬೆಳೆಸುವ ಇಂತಹ ಕಾರ್ಯಗಳು ಎಲ್ಲರಿಗೂ ಪ್ರೇರಣೆಯಾಗಬೇಕು ಎಂದರು.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ಸಂಸ್ಥಾನದ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ, ಕಾಂಗ್ರೆಸ್ ನಾಯಕಿ ಕುಸುಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಂವಿಧಾನ ದಿನಾಚರಣೆಯಲ್ಲಿ ಯುವ ಸಂಸತ್ತಿನ 224 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ: ಮುನಿಯಪ್ಪ

● ವಿಕ್ರಮ ವಾಹಿನಿ । ಬೆಂಗಳೂರು

ನವೆಂಬರ್ 26ರಂದು ಮೈಸೂರಿನ ಮಹಾರಾಜ ಮೈದಾನದಲ್ಲಿ ನಡೆಯಲಿರುವ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಂದ ಯುವ ಸಂಸತ್ ಕಾರ್ಯಕ್ರಮದ ಮೂಲಕ ಆಯ್ಕೆಯಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ವಿಕಾಸಸೌಧದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಂವಿಧಾನ ದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಂವಿಧಾನ ದಿನಾಚರಣೆಯನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸುವ ಮೂಲಕ ಸಂವಿಧಾನದ ಮಹತ್ವ ಮತ್ತು ಆಶಯಗಳ ಕುರಿತು ಜನರಲ್ಲಿ ಅರಿವು ಮೂಡಿಸಬೇಕು ಎಂದು ಹೇಳಿದರು.



ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಂದ ಯುವ ಸಂಸತ್ ಕಾರ್ಯಕ್ರಮದಡಿ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಆಯ್ಕೆಯಾದ ತಲಾ ಒಬ್ಬ ಪ್ರತಿಭಾವಂತ ವಿದ್ಯಾರ್ಥಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮತ್ತು ಅರ್ಥಪೂರ್ಣವಾಗಿ ಆಯೋಜಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕಲಾತಂಡಗಳ ಪ್ರದರ್ಶನ ಏರ್ಪಡಿಸಲಾಗುವುದು. ಎಲ್‌ಇಡಿ ವಾಹನಗಳ ಮೂಲಕ ಸಂವಿಧಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಜನರಿಗೆ ತಲುಪಿಸಿ ಅದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ನೃತ್ಯ ತಂಡಗಳ ಮೂಲಕ ಪ್ರದರ್ಶಿಸಲಾಗುವುದು. ವಕೀಲರ ತಂಡಗಳು ಸಂವಿಧಾನ ಮತ್ತು ಅದರಲ್ಲಿರುವ ಕಾನೂನುಗಳ ಕುರಿತು ಜನರಿಗೆ ಮಾಹಿತಿ ನೀಡಲಿವೆ ಎಂದು ತಿಳಿಸಿದರು.

ಈ ಎಲ್ಲ ಕಾರ್ಯಕ್ರಮಗಳ ಆಯೋಜನೆಗೆ ಜಿಲ್ಲಾಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕಾರ್ಯಕ್ರಮವನ್ನು ಶಿಸ್ತುಬದ್ಧವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಕೃಷಿ ಸಚಿವ ನರೇಂದ್ರ ಸ್ವಾಮಿ, ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಯತೀಂದ್ರ ಸಿದ್ದರಾಮಯ್ಯ, ರೇಷ್ಮೆ ಸಚಿವ ಪುಟ್ಟರಂಗ ಶೆಟ್ಟಿ, ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಅಲೆಮಾರಿ ನಿಗಮದ ಅಧ್ಯಕ್ಷೆ ಪಲ್ಲವಿ, ಡಿಸಿಆರ್‌ಇ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಹರಿಶೇಖರನ್, ಆಯುಕ್ತ ನಾಗರಾಜು, ಸಲಹೆಗಾರ ವೆಂಕಟಯ್ಯ, ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಎಚ್. ನಟರಾಜ್, ಕೈಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶಿವಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸರಿಯಾಗಿ ಕೆಲಸ ಮಾಡದಿದ್ದರೆ ಒಂದೇ ಗಂಟೆಯಲ್ಲಿ ವರ್ಗಾವಣೆ: ಡಿಕೆಶಿ ಕಡಕ್ ವಾರ್ನಿಂಗ್

● ವಿಕ್ರಮ ವಾಹಿನಿ । ಬೆಂಗಳೂರು

"ನೀವು ಯಾರಿಗೂ ಒಂದು ರೂಪಾಯಿ ಲಂಚ ಕೊಟ್ಟು ಈ ಹುದ್ದೆಗಳಿಗೆ ಬಂದಿಲ್ಲ. ಹೀಗಾಗಿ ನಿಷ್ಠೆಯಿಂದ ಮತ್ತು ಸಮರ್ಪಕವಾಗಿ ಕೆಲಸ ಮಾಡಿ. ಹೊಸದಾಗಿ ನೇಮಕವಾಗಿದ್ದೇವೆ, ಒಂದು ವರ್ಷ ನಮ್ಮನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎಂದುಕೊಂಡಿದ್ದರೆ ಅದು ನಿಮ್ಮ ಭ್ರಮೆ. ಸರಿಯಾಗಿ ಕೆಲಸ ಮಾಡದಿದ್ದರೆ ಒಂದೇ ಗಂಟೆಯೊಳಗೆ ಬದಲಾವಣೆ ಮಾಡುತ್ತೇವೆ" ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೂತನ ಪೊಲೀಸ್ ಕಮಿಷನರೇಟ್ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

*ಪೊಲೀಸ್ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಹೊಸದಾಗಿ ರಚಿಸಲಾಗಿರುವ ಐದು ಪೊಲೀಸ್ ಕಮಿಷನರೇಟ್‌ಗಳ ಅಧಿಕಾರಿಗಳಿಗೆ ಕರ್ತವ್ಯ ನಿರ್ವಹಣೆ ಕುರಿತು ಸ್ಪಷ್ಟ ಸೂಚನೆಗಳನ್ನು ನೀಡಿದರು. ಸಾರ್ವಜನಿಕರಿಗೆ ಪೊಲೀಸರ ಬಗ್ಗೆ ಗೌರವ ಮತ್ತು ವಿಶ್ವಾಸ ಇರಬೇಕು. ಅದೇ ವೇಳೆ ಅಪರಾಧಿಗಳಿಗೆ ಪೊಲೀಸರ ಬಗ್ಗೆ ಭಯವೂ ಇರಬೇಕು. ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು ಎಂಬ ಉದ್ದೇಶದಿಂದ ಐದು ಕಮಿಷನರೇಟ್‌ಗಳನ್ನು ರಚಿಸಲಾಗಿದೆ. ಅಧಿಕಾರಿಗಳು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಕುರಿತು ಈಗಾಗಲೇ ಮಾರ್ಗದರ್ಶನ ನೀಡಲಾಗಿದೆ. ಆರ್ಥಿಕ ಅಪರಾಧಗಳು, ಸಂಚಾರ ಸಮಸ್ಯೆಗಳು, ಸಾಮಾನ್ಯ ಅಪರಾಧಗಳು ಮತ್ತು ದ್ವೇಷ ಭಾಷಣ ಸೇರಿದಂತೆ ಎಲ್ಲ ರೀತ